## *ಅಧ್ಯಾಯ IX*

# *ನೂತನ ಸೃಷ್ಟಿಯ ನ್ಯಾಯವಿಚಾರಣೆ*

**ಯೆಹೋವನು ವಿಶ್ವದ ಮಹಾ ನ್ಯಾಯಾಧಿಪತಿ – ಎಲ್ಲಾ ಆಶೀರ್ವಾದಗಳೂ, ಕೃಪೆ ಮುಂತದವುಗಳು ಯೆಹೋವನಿಂದ, ಆತನ ಮಗನ ಮುಖಾಂತರ – ನೂತನ ಸೃಷ್ಟಿಗಳು ಕ್ರಿಸ್ತನೊಡನಾಡಿಗಳು, ಜೊತೆ ವಾರಸುದಾರರುಗಳು –" ಭೂಪರಲೋಕಗಳಲ್ಲಿ ಎಲ್ಲಾ ಅಧಿಕಾರಗಳು ನನಗೆ ಕೊಡಲ್ಪಟ್ಟಿದೆ" – ಮಾನವ ದಂಡನೆಯ ಬಗ್ಗೆ ತಂದೆಯ ತೀರ್ಪು ಈಗಾಗಲೆ ವ್ಯಕ್ತವಾಗಿದೆ – ಧರ್ಮಯುಗದ ಕಾಲದಲ್ಲಿನ ತೀರ್ಪು ಕರುಣೆ ಮತ್ತು ನೆರವಿನಲ್ಲಿ ಒಂದಾಗಿದೆ – ಕಾರ್ಯನಿರ್ವಾಹಕವಾದ ಅಂತಿಮ ತೀರ್ಪಿನಲ್ಲಿ ಕರುಣೆ ಇರದು – ಸುವಾರ್ತಾ ಯುಗದಲ್ಲಿ ನೂತನ ಸೃಷ್ಟಿಯ ತೀರ್ಪು – ನೂತನ ಸೃಷ್ಟಿಯ ತೀರ್ಪು ಸಮರ್ಪಕವಾದ ಪ್ರೀತಿಯ ನಿಯಮದಡಿಯಲ್ಲಿರುತ್ತದೆ – ದೇಹದ ಮೇಲೆ ಭವ್ಯವಾದ ಶಿರಸ್ಸಿನ ಮೇಲ್ವಿಚಾರಣೆ – " ನೀವು ಇತರರಿಗೆ ತೀರ್ಪುಮಾಡಿದಂತೆಯೇ ನಿಮಗೂ ತೀರ್ಪುಮಾಡಲಾಗುವುದು" – ನಾವು ನಮ್ಮನ್ನು ಸರಿಯಾದ ರೀತಿಯಲ್ಲಿ ತೀರ್ಮಾನಿಸಿಕೊಳ್ಳತಕ್ಕದ್ದು – " ನಮಗೆ ತೀರ್ಪುಮಾಡುವಾತನು ಕರ್ತನೇ" – ಸಭೆಯು ಕೆಲವು ಸಂಗತಿಗಳ ಬಗ್ಗೆ ತೀರ್ಪುಮಾಡ ತಕ್ಕದ್ದು – "ನಿನ್ನ ಸಹೋದರನು ನಿನಗೆ ವಿರೋಧವಾಗಿ ತಪ್ಪು ಮಾಡಿದರೆ ಅವನನ್ನು ಏಳೆಪ್ಪತ್ತು ಸಾರಿ ಕ್ಷಮಿಸು" – ಸಭೆಗೆ ವಿರೋಧವಾದ ಅಪರಾಧಗಳು – ನಾವೆಲ್ಲರೂ ಕ್ರಿಸ್ತನ ನ್ಯಾಯಾಸ್ಥಾನದ ಮುಂದೆ ಹಾಜರಾಗತಕ್ಕದ್ದು.**

ಈ ಲೋಕದ ಮೂಲ ಜನಕನಾದ ಆದಾಮನು ತನ್ನ ಶೋಧನೆಯಲ್ಲಿ ಸೋತುಹೋದಾಗ ಸಮಗ್ರ ಮಾನವ ಕೋಟಿಯು ನಿತ್ಯಜೀವಕ್ಕೆ ಅನರ್ಹರು ಎಂಬ ತೀರ್ಪನ್ನು ಸರ್ವೋಚ್ಛ ನ್ಯಾಯಾಧಿಪತಿಯಾದ ಯೆಹೋವನು ನೀಡಿದ್ದಾನೆಂಬುದನ್ನು ನಾವು ಈಗಾಗಲೇ ನೋಡಿದ್ದೇವೆ (ಸಂಪುಟ I : ಅಧ್ಯಾಯ vii ನೋಡಿರಿ). ***"ಒಬ್ಬ ಮನುಷ್ಯನಿಂದಲೇ ಪಾಪವೂ ಪಾಪದಿಂದ ಮರಣವೂ ಲೋಕದೊಳಗೆ ಸೇರಿದವು ; ಎಲ್ಲರೂ ಪಾಪ ಮಾಡಿದ್ದರಿಂದ ಮರಣವು ಹೀಗೆ ಎಲ್ಲರಲ್ಲಿಯೂ ವ್ಯಾಪಿಸಿತು"*** (ರೋಮ ೫:೧೨). ಆದಾಮನ ಸೋಲುವಿಕೆಯ ನಿಮಿತ್ತ ನೀಡಲ್ಪಟ್ಟ ಮರಣ ದಂಡನೆಯು ಆತನ ಎಲ್ಲಾ ಮಕ್ಕಳ ಮೇಲೆಯೂ ಸ್ಥಿರಪಟ್ಟಿತು. ಆತನ ಪತನ, ಆತನ ಕಳಂಕ, ಆತನ ಪಾಪ ಇವುಗಳು ಸ್ವಾಭಾವಿಕವಾದ ರೀತಿಯಲ್ಲಿ ಆದರೆ ಹೆಚ್ಚುವ ತೀವ್ರತೆಯಲ್ಲಿ ಆತನ ಜನಾಂಗದ ಮೇಲೆ ವ್ಯಾಪಿಸಿತು. ಈ ತೀರ್ಪು ಎಲ್ಲಾ ರೀತಿಯಲ್ಲಿಯೂ ನ್ಯಾಯೋಚಿತವಾಗಿದ್ದು ಮಾರ್ಪಡಿಸಲಾಗದ್ದಾಗಿತ್ತೆಂದು ನಾವೀಗಾಗಲೇ ನೋಡಿದ್ದೇವೆ. ವಿಶ್ವದ ಮಹಾ ನ್ಯಾಧಿಪತಿಯು ಮಾನವನು ನಿತ್ಯಜೀವಕ್ಕೆ ಅನರ್ಹನು ಎಂದು ಉಚಿತವಾಗಿ ತೀರ್ಮಾನಿಸಿ ತನ್ನ ಸ್ವಂತ ತೀರ್ಪನು ಬದಲಾಯಿಸಲಿಲ್ಲ, ತಪ್ಪನ್ನು ಸರಿಯೆಂದು ಮತ್ತು ಅನರ್ಹರನ್ನು ನಿತ್ಯಜೀವಕ್ಕೆ ಅರ್ಹರೆಂದು ಘೋಷಿಸಲಿಲ್ಲ. ಆದರೆ ಆತನಿಗೆ ನಮ್ಮ ಮೇಲೆ ಅನುಕಂಪವಿತ್ತೆಂಬುದನ್ನೂ ನಾವು ನೋಡಿದ್ದೇವೆ. ಆದುದರಿಂದ ಲೋಕದ ಅಸ್ತಿವಾರವು ಹಾಕಲ್ಪಡುವ ಮೊದಲೇ ಸಿದ್ಧವಾಗಿದ್ದ ಆತನ ಕೃಪಾ ಯೋಜನೆಯಲ್ಲಿ ಆತನು ಚಿಂತಿಸಿ ಸಮಸ್ತ ಜನಾಂಗದ ಸಂಧಾನದ ಅವಕಾಶವನ್ನು ಮಾಡಿದ್ದನು (ಸಂಪುಟ v ನೋಡಿರಿ). ಈ ಪ್ರಕಾರ ಆತನು ಮತ್ತೊಂದು ನ್ಯಾಯ ವಿಚಾರಣೆ ಮತ್ತು ತೀರ್ಪಿನ ಅವಕಾಶವನ್ನು ಎಲ್ಲಾ ಸದಸ್ಯರುಗಳಿಗಾಗಿ ಒದಗಿಸಿಕೊಟ್ಟು ನಮ್ಮ ಜನಾಂಗದ ಆಶೀರ್ವಾದ ಮತ್ತು ಒಳಿತಿಗಾಗಿ ತನ್ನ ಪ್ರೀತಿಯ ಕುಮಾರನು ಸಂಧಾನ ಪ್ರಾಯಶ್ಚಿತ್ತವನ್ನು ಮಾಡಿ ಇದರ ಮಧ್ಯಸ್ತನಾಗುವಂತೆ ನೂತನ ವ್ಯವಸ್ಥೆಯೊಂದನ್ನು ಮಾಡಿದನು. ವಿಧೇಯರ ನ್ಯಾಯತೀರ್ಪು ಮತ್ತು ಮೇಲೆತ್ತುವಿಕೆಯು ಈ ಲೋಕದ ಮಹಾ ತೀರ್ಪಿಗಾಗಿಯೇ ಪ್ರತ್ಯೇಕಿಸಲ್ಪಟ್ಟ ಧರ್ಮಯುಗದಲ್ಲುಂಟಾಗುತ್ತದೆ ಎಂಬುದನ್ನೂ ನಾವು ನೋಡಿದ್ದೇವೆ. ಈ ನ್ಯಾಯತೀರ್ಪಿನ ದಿನದಲ್ಲಿ ಪ್ರತಿಯೊಬ್ಬನಿಗೂ ಕರ್ತನ ತಿಳುವಳಿಕೆಗೆ ಬರುವ ಅವಕಾಶ ನೀಡಲಾಗುವುದು. ಮಾತ್ರವಲ್ಲದೆ ಆತನೊಂದಿಗೆ ಸಾಮರಸ್ಯದಿಂದಿರಲು ಮತ್ತು ತಮ್ಮ ನಿಷ್ಟೆ ಮತ್ತು ವಿಧೇಯತೆಯ ಕಾರಣ ತಾವು ನಿತ್ಯಜೀವಕ್ಕೆ ತಾವು ಅರ್ಹರೆಂದು ಸಾಬೀತುಪಡಿಸುವ ಅವಕಾಶವನ್ನೂ ನೀಡಿದ್ದಾನೆ. ಈ ಬಗ್ಗೆ ಅಪೋಸ್ತಲನು ಹೇಳುವುದೇನೆಂದರೆ – ***"ಆತನು ನಿಷ್ಕರ್ಷೆಮಾಡಿದ ಪುರುಷನ ಕೈಯಿಂದ ನೀತಿಗನುಸಾರವಾಗಿ ಭೂಲೋಕದ ನ್ಯಾಯವಿಚಾರಣೆ ಮಾಡುವುದಕ್ಕೆ ಒಂದು ದಿವಸವನ್ನು ಗೊತ್ತುಮಾಡಿದ್ದಾನೆ"*** (ಅ,ಕೃ.೧೭:೩೧).

ಪ್ರಶ್ನಾತೀತವಾಗಿ ಯೆಹೋವನೇ ಸರ್ವೋಚ್ಛ ನ್ಯಾಯಾಧಿಪತಿ ಮತ್ತು ಆತನು ಕಾನೂನುಗಳು ಶ್ರೇಷ್ಠಮಟ್ಟದವುಗಳು ಇದರ ಪ್ರಕಾರವೇ ನಿತ್ಯಜೀವಿತದ ಎಲ್ಲಾ ನಿರ್ಧಾರಗಳನ್ನೂ ಕೈಕೊಳ್ಳಬೇಕಾಗುತ್ತದೆ. ಎಲ್ಲರಿಗೂ ದೇವರೇ ನ್ಯಾಯಾಧಿಪತಿ ಎಂಬುದಾಗಿಯೂ ಕ್ರಿಸ್ತನು ಮಧ್ಯಸ್ಥಗಾರನೆಂಬುದಾಗಿಯೂ ಅಪೋಸ್ತಲನು ಬರೆಯುತ್ತಾನೆ (ಇಬ್ರಿಯ ೧೨:೨೩-೨೪ ನೋಡಿರಿ). ಆತನು ಮತ್ತೊಮ್ಮೆ “ ದೇವರು ತನ್ನ ಜನರಿಗೆ ನ್ಯಾಯ ತೀರಿಸುವವನಾಗಿದ್ದಾನೆ” ಎಂದು ಹೇಳುತ್ತಾ ಮುಯ್ಯಿ ತೀರಿಸುವುದು ದೇವರ ಕೆಲಸ ಎಂದು ಹೇಳುತ್ತಾನೆ (ರೋಮ ೧೨:೧೯ ಮತ್ತು ಇಬ್ರೀಯ ೧೦:೩೦ ಇವುಗಳನ್ನು ನೋಡಿರಿ). ಹಳೇ ಒಡಂಬಡಿಕೆಯಲ್ಲಿ ಉಲ್ಲೇಖವಾಗಿರುವ ಈ ಹೇಳಿಕೆಗಳಲ್ಲಿ (ಕೀ ೫೦:೪ ಮತ್ತು ಧರ್ಮೋ ೩೨:೩೫-೩೬ ಇವುಗಳನ್ನು ನೋಡಿರಿ ) ಹೇಳಿರುವ ಕರ್ತನು ಎಂಬುದು ಯೇಹೋವನಿಗೆ ಸಲ್ಲುತ್ತದೆ. ಮತ್ತೊಮ್ಮೆ ಅಪೋಸ್ತಲನು “ ***ದೇವರು ಯೇಸುಕ್ರಿಸ್ತನ ಮೂಲಕವಾಗಿ ಮನುಷ್ಯರ ಗುಟ್ಟುಗಳನ್ನು ಹಿಡಿದು ವಿಚಾರಿಸುವ ದಿನವು ಬರುತ್ತದೆ***”( ರೋಮ ೨:೧೬, ೩:೬ ಸಹಾ ನೋಡಿರಿ) ಎಂದಿದ್ದಾನೆ. ಯೇಹೋವನೇ ಮೂಲದಲ್ಲಿ ಕಾನೂನನ್ನು ನೀಡಿದಾತನು ಮತ್ತು ಆತನೇ ನ್ಯಾಯಾಧಿಪತಿ. ಈ ಸಂಬಂಧವನ್ನು ಆತನು ತನ್ನೆಲ್ಲಾ ಸೃಷ್ಟಿಯೊಂದಿಗೆ ಸದಾ ಕಾಪಾಡುವನು. ಆತನು ತನ್ನ ಮಹಿಮೆಯನ್ನು ಮತ್ತೊಬ್ಬನಿಗೆ ಸಲ್ಲಗೊಡನು (ಯೆಶಾಯ ೪೨:೮ ನೋಡಿರಿ). ಈ ರೀತಿಯಲ್ಲಿ ಆತನು ತಾನು ತನ್ನ ಜನರ ಕುರುಬನು ಎಂದು ಹೇಳಿಕೊಂಡಿದ್ದಾನೆ. ಕೀರ್ತನೆಗಾರನು ಸಹಾ“***ಯೆಹೋವನು ನನ್ನ ಕುರುಬನು, ಕೊರತೆಪಡೆನು***” (ಕೀ ೨೩:೧) ಎಂದಿದ್ದಾನೆ. ಪುನಃ ಆತನು ತನ್ನನು ತನ್ನ ಜನರ ವಿಮೋಚಕನು ಎಂದು ಹೆಸರಿಸುತ್ತಾನೆ. “***ಕರ್ತನಾದ ನಾನೇ ನಿನ್ನ ರಕ್ಷಕನು, ನಿನ್ನ ವಿಮೋಚಕನು, ಯಾಕೋಬ್ಯರ ಶೂರನು ಎಂದು ನರಜನ್ಮದವರೆಲ್ಲರಿಗೂ ಗೊತ್ತಾಗುವುದು***” (ಯೆಶಾಯ ೪೯:೨೬). ದೇವರ ವಾಕ್ಯದ ಶ್ರೇಷ್ಟವಾದ ಅರ್ಥದಲ್ಲಿ ಯೆಹೋವನು ತಾನೇ ರಕ್ಷಣಾ ಯೋಜನೆಯ ಮತ್ತು ಅದರ ಎಲ್ಲಾ ಲಕ್ಷಣಗಳ ಕೇಂದ್ರ ಬಿಂದುವಾಗಿದ್ದಾನೆ. ಈ ವಿಷಯಲ್ಲಿನ ಬೇರೆ ಯಾವುದೇ ದೃಷ್ಟಿಕೋನವು ಕುಂದುಳ್ಳದಾಗಿದೆ.

ಹೀಗಿದ್ದಾಗ್ಯೂ, ತಂದೆಗೆ ಎಲ್ಲವನ್ನೂ ತನ್ನ ಕುಮಾರನ ಮುಖಾಂತರ ಸೃಷ್ಟಿಸುವುದರಲ್ಲಿ ಸಂತೋಷವಿದ್ದುದರಿಂದ (ಯೋಹಾನ ೧:೧ ನೋಡಿರಿ) ಆತನು ಎಲ್ಲಾ ಸಂಗತಿಗಳಲ್ಲಿ ಆತನನ್ನು ತನ್ನ ಗೌರವ ಸಾಧನವನ್ನಾಗಿ ಘನತೆಗೇರಿಸಿದನು. ಈ ದೃಷ್ಟಿಕೋನದಿಂದ ಎಲ್ಲಾ ಆಶೀರ್ವಾದಗಳೂ, ಎಲ್ಲಾ ಅಧಿಕಾರವೂ, ಎಲ್ಲಾ ಕೃಪೆಯೂ ತಂದೆಯಿಂದಲೂ, ಮಗನಿಂದಲೂ ಹೊರಟವು ಮತ್ತು ಮಗನೊಂದಿಗೆ ಸಂಬಂಧವಿರಿಸಿಕೊಂಡ ನೂತನ ಸೃಷ್ಟಿಯು ಆತನೊಂದಿಗೆ ದೇವರ ಕೃಪೆಯ ನಿಯೋಗಿಗಳೂ, ಜೊತೆ ವಾರಸುದಾರರೂ ಆಗಿ ಮಾಡಲ್ಪಟ್ಟರು.

ಪೂರ್ಣವಾದ ಅರ್ಥದಲ್ಲಿ ಪರಲೋಕದ ತಂದೆಯು ತನ್ನ ಸ್ವಂತ ಕಾರ್ಯದಿಂದ ವಿಶ್ರಮಿಸಿದಾಗ ಮಗನನ್ನು ತನ್ನ ನಿಯೋಗಿಯನ್ನಾಗಿ ಬಳಸಿಕೊಂಡದ್ದರಿಂದ ನಮ್ಮ ವಿಮೋಚಕನು “ ***ತಂದೆಯು ಯಾರಿಗೂ ತೀರ್ಪುಮಾಡುವುದಿಲ್ಲ ; ತೀರ್ಪು ಮಾಡುವ ಅಧಿಕಾರವನ್ನೆಲ್ಲಾ ಮಗನಿಗೆ ಕೊಟ್ಟಿದ್ದಾನೆ***” (ಯೋಹಾನ ೫:೨೨) ಎಂದು ಹೇಳಿದ್ದಾನೆ. ನಮ್ಮ ಕರ್ತನು ಈ ಮಾತುಗಳನ್ನು ತನ್ನ ತಂದೆಯು ತನಗೆ ಕೊಟ್ಟ ಕೆಲಸವನ್ನು ಕಲ್ವಾರಿಯಲ್ಲಿ ಮಾಡಿ ತೀರಿಸುವ ಮುನ್ನವೇ ಹೇಳುತ್ತಾನೆ. ಆದರೆ ಆತನು ತಾನು ಪೂರೈಸಿದ ಕೆಲಸವನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಮಾತುಗಳನ್ನು ಹೇಳುತ್ತಾನೆ. ದೇವರು ಉದ್ದೇಶಿಸಿದ ಕಾರ್ಯಕ್ಕಾಗಿ, ಪರಣಪರ್ಯಂತ ಇರಬೇಕಾದ ಆತನ ನಿಷ್ಠೆಯನ್ನು ನಿರ್ಧರಿಸಲೋಸುಗ ಆತನನ್ನೇ ಶೋಧನೆಗೊಳಪಡಿಸಲಾಯಿತೆಂದು ನಾವೀಗಾಗಲೇ ನೋಡಿದ್ದೇವೆ. ಈ ರೀತಿಯಲ್ಲಿ ಆತನು ತಾನೊಬ್ಬ ನಿಷ್ಠಾವಂತ ಮತ್ತು ಕರುಣಾಭರಿತ ಮಹಾ ಯಾಜಕನೆಂಬುದನ್ನು ನಿರೂಪಿಸಿದ್ದಲ್ಲದೆ ತನ್ನ ಸ್ವಂತ ರಕ್ತದ ಮೂಲಕವಾಗಿ ಮಾನವಕುಲದ ಪರವಾಗಿ ನೂತನ ಒಡಂಬಡಿಕೆಯೊಂದನ್ನು ಖಚಿತಪಡಿಸಿ ನೂತನ ಜೀವನ ಮಾರ್ಗವೊಂದನ್ನು ತೆರೆದನಲ್ಲದೆ ಮರಣ ಹಾಗೂ ಸಮಾಧಿಯ ಬೀಗದಕ್ಕೈಗಳನ್ನು ಪಡಕೊಂಡವನಾಗಿ ಮರಣದ ಸೆರೆಯಲ್ಲಿದ್ದವರಿಗೆ “ಮೇಲೆದ್ದು ಬರ್ರಿ” ಎನ್ನುವ ಮತ್ತು ತನ್ನ ಮಾತುಗಳನ್ನು ವಿಧೇಯತೆಯಿಂದ ಕೇಳುವ ಅನೇಕರನ್ನು ಆಶೀರ್ವದಿಸಿ ಮೇಲೆತ್ತುವ ಅಧಿಕಾರವನ್ನು ಪಡಕೊಂಡನು. ಕಟ್ಟುನಿಟ್ಟಾಗಿ ಹೇಳಬೇಕಾದರೆ, ಕರ್ತನು ತಾನು ಪುನರುತ್ಥಾನ ಹೊಂದಿದ

ತಂದೆಯು ನ್ಯಾಯತೀರ್ಪಿನ ಅಧಿಕಾರವನ್ನೆಲ್ಲಾ ತನ್ನ ಮಗನಿಗೆ ಒಪ್ಪಿಸಿಕೊಟ್ಟನು ಮತ್ತು ಮಗನು ***"ಪರಲೋಕದಲ್ಲಿಯೂ, ಭೂಲೋಕದಲ್ಲಿಯೂ ಎಲ್ಲಾ ಅಧಿಕಾರವು ನನಗೆ ಕೊಡಲ್ಪಟ್ಟಿದೆ"*** (ಮತ್ತಾಯ ೨೮:೧೮) ಎಂದು ಸಾರಿ ತಿಳಿಸಿದನು. ಈ ಅಧಿಕಾರವನ್ನು ಆತನು ಅಪೋಸ್ತಲರನ್ನು ತನ್ನ ರಾಯಭಾರಿಗಳನ್ನಾಗಿ ನೇಮಿಸಿ ಅವರಿಗೆ ಮದಲಗಿತ್ತಿಯ ವರ್ಗಕ್ಕೆ ಸೇರಿದ ಸಭೆಯವರನ್ನು ನೂತನ ಸೃಷ್ಟಿಯ ತಮ್ಮ ಸಂಗಡಿಗ ಸದಸ್ಯರನ್ನಾಗಿ ಒಗ್ಗೂಡಿಸುವ ಕಾರ್ಯವನ್ನು ವಹಿಸಿಕೊಡುವುದರ ಮೂಲಕ ಕಾರ್ಯಗತಗೊಳಿಸಿದನು.

ಮಾನವಕುಲದ ಬಗ್ಗೆ ತಂದೆಯ ತೀರ್ಪನ್ನು ಈಗಾಗಲೇ ವ್ಯಕ್ತಪಡಿಸಲಾಗಿದ್ದು ಅದರಲ್ಲಿ ಎಲ್ಲರನ್ನೂ ಶಿಕ್ಷೆಗೆ ಒಳಪಡಿಸಲಾಗಿದೆ. ಸಂಪೂರ್ಣ ನೈತಿಕತೆಯಡಿಯಲ್ಲಿ ಆತನ ಪಾಲಿನ ಇನ್ನಾವ್ಯವುದೇ ರೀತಿಯ ಮುಂದಣ ತೀರ್ಪು ಯಾವುದೇ ಜನಾಂಗದವರಿಗೂ ನಿರ್ಧಿಷ್ಟವಾಗಿ ಲಾಭದಾಯಕವಾಗಲಾರದು. ಯಾಕೆಂದರೆ, "ಎಲ್ಲರೂ ಪಾಪ ಮಾಡಿ ದೇವರ ಮಹಿಮೆಯನ್ನು ಹೊಂದದೇ ಹೋಗಿದ್ದಾರೆ. ನೀತಿವಂತನು ಒಬ್ಬನಾದರೂ ಇಲ್ಲ" ; ದೈವಿಕ ನಿರ್ಧಿಷ್ಟಮಾನವು ಪೂರ್ಣ ನೀತಿವಂತಿಕೆಯಿಂದ, ಪರಿಪೂರ್ಣತೆಯಿಂದ ಕಿಂಚಿತ್ತು ಕಡಿಮೆಯಾದರೂ ಸ್ವೀಕರಿಸಲಾರದು. ಈ ಕಾರಣದಿಂದ ಕರ್ತನಾದ ಯೇಸು ನಮ್ಮ ಮಧ್ಯಸ್ಥನಾಗ ಬೇಕೆಂಬುದು ದೇವರ ವ್ಯವಸ್ಥೆಯಾಗಿದೆ. ಆತನು ನ್ಯಾಯವನ್ನು ತೃಪ್ತಿಪಡಿಸುವವನಾಗಿ, ಪತನಗೊಂಡ ಜನಾಂಗದ ಪ್ರತಿನಿಧಿಯಾಗಿ ಮಧ್ಯೆ ಪ್ರವೇಶಿಸಬಲ್ಲವನಾಗಿದ್ದಾನೆ. ದೇವರ ನ್ಯಾಯವು ಈತನನ್ನು ಮನುಷ್ಯರ ಪ್ರತಿನಿಧಿಯಾಗಿ ಕಾಣುತ್ತದೆ ಮತ್ತು ಈತನು ಜನಾಂಗದ ಹೊಣೆಹೊತ್ತವನಾಗಿದ್ದಾನೆ. ಯೇಸುವು ತನಗೆ ನೇಮಿಸಿದ ಕೆಲಸವನ್ನು ಪೂರೈಸುವವರೆಗೆ, ಯಾರು ಸೃಷ್ಟಿಕರ್ತನ ಬಗ್ಗೆ ಮತ್ತು ಆತನ ನೈತಿಕ ನಿಯಮಗಳ ಬಗ್ಗೆ ತಿಳುವಳಿಕೆ ಪಡಕೊಂಡು ದೇವರ ಸಾಮರಸ್ಯದಲ್ಲಿ ಸಂಪೂರ್ಣವಾಗಿ ಇರಬಯಸುತ್ತಾರೋ ಅವರುಗಳನ್ನೆಲ್ಲಾ ಆತನ ಸಾಂಗತ್ಯಕ್ಕೆ ಸೇರಿಸುವವರೆಗೆ ತನ್ನ ಮಧ್ಯಸ್ಥಿಕೆಯ ಸಂಬಂಧವನ್ನು ಉಳಿಸಿಕೊಂಡಿರುತ್ತಾನೆ. ಇದಕ್ಕಿಂತ ಹೆಚ್ಚಾಗಿ, ಆತನ "ಸಮಗ್ರ ತೀರ್ಪು" ತಾನು ವಿಚಾರಣೆಯಲ್ಲಿ ಕಂಡುಹಿಡಿದವುಗಳ ನಿರ್ವಹಣೆಯಾಗಿದ್ದು ಆತನು ವಿಧೇಯರಿಗೆ ಬಹುಮಾನ ನೀಡುವನಲ್ಲದೆ ಈ ಲೋಕವನ್ನು ಭ್ರಷ್ಟಗೊಳಿಸಿದವರನ್ನು ನಾಶಪಡಿಸುತ್ತಾನೆ – ತಿಳಿದೂ ತಿಳಿದು ಪಾಪಮಾಡುವವರನ್ನು ನಾಶಗೊಳಿಸುತ್ತಾನೆ. ಜನರಲ್ಲಿ ಆತನ ಮಾತುಗಳನ್ನು, ಆಜ್ಞೆಗಳನ್ನು ಮತ್ತು ಸೂಚನೆಗಳನ್ನು ಕೇಳದೇ ಇರುವವರನ್ನು ನಾಶಪಡಿಸಿ ಎಲ್ಲಾ ಪಾಪವನ್ನೂ, ಅವಿಧೇಯತ್ವವನ್ನೂ, ಕಡೇಶತ್ರುವಾದ ಮರಣವನ್ನು ಸಹಾ ಕೆಳಕ್ಕೆ ತುಳಿದುಬಿಡುವನು (೧ ಕೊರಿ ೧೫:೨೫–೨೮, ಪ್ರಕಟನೆ ೧೧:೧೮, ೨ ಥೆಸ ೨:೮ ಮತ್ತು ಇಬ್ರಿಯ ೨:೧೪ ಇವುಗಳನ್ನು ನೋಡಿರಿ)

ಈ ತೀರ್ಪು ಭಾಗಗಳುಳ್ಳದ್ದಾಗಿರುತ್ತದೆ. ಯಾಕೆಂದರೆ ಮಧ್ಯಸ್ಥನು ಧರ್ಮಯುಗದಲ್ಲಿ – ಮಾನವ ಜಾತಿಯ ಅಸಮರ್ಪಕತೆಗಳನ್ನು ಸ್ವಲ್ಪಮಟ್ಟಿಗೆ ಬದಿಗೆ ಸರಿಸಿ ತಪ್ಪು ತಿದ್ದಿಕೊಳ್ಳುವವರನ್ನು ಬಹುಮಾನಿಸುತ್ತಾನೆ – ಯೆಹೋವನ ಸೇವಕನ ಅಥವಾ ಪ್ರತಿನಿಧಿಯ ಪಾತ್ರದಲ್ಲಿ ಧರ್ಮಯುಗದ ಅಂತ್ಯದಲ್ಲಿ – ನಿತ್ಯಜೀವದ ನಿರಂತರವಾದ ಬಹುಮಾನವನ್ನು ಯೋಗ್ಯವಾಗಿ ಕಂಡುಬರುವವರಿಗೆ ದಯಪಾಲಿಸುತ್ತಾನೆ ಮತ್ತು ಅಯೋಗ್ಯರನ್ನು ನಿತ್ಯ ನಾಶನಕ್ಕೆ ಗುರಿಮಾಡುತ್ತಾನೆ. ಈ ಅಂತಿಮವಾದ ನ್ಯಾಯತೀರ್ಪಿನ ನಿರ್ವಹಣೆಯು ನಿಷ್ಕರುಣೆಯಿಂದೊಡಗೂಡಿದ ನ್ಯಾಯಸಮ್ಮತ ವಾಗಿರುತ್ತದೆ – ಕರುಣ್ಯ ಸರಿಯಾದ ಉಪಯೋಗವು ಮತ್ತು ಉದ್ಧೇಶಗಳು ಧರ್ಮಯುಗದಲ್ಲೆ ಪೂರೈಸಬೇಕಾಗುತ್ತದೆ. ಇದಕ್ಕಾಗಿ ಕರುಣೆ ಮತ್ತು ನೆರವನ್ನು ಜನಾಂಗದ ಪ್ರತಿಯೊಬ್ಬ ಸದಸ್ಯನಿಗೂ ವಿಮೋಚಕನು ಒದಗಿಸುತ್ತಾನೆ. ಅನುಕಂಪದಿಂದೊಡಗೂಡಿದ ಧರ್ಮಯುಗದಲ್ಲಿ ಆಶೀರ್ವಾದ, ನ್ಯಾಯತೀರ್ವಿಕೆ, ನಿರ್ಣಯ, ಸರಿಪಡಿಸಿಕೊಳ್ಳುವಿಕೆ ಮುಂತಾದ ವಿವಿಧ ಲಕ್ಷಣಗಳಲ್ಲಿ ಬಹುಶಃ ಅಂತಿಮ ಬಹುಮಾನಗಳನ್ನು ಅಥವಾ ಶಿಕ್ಷೆಗಳನ್ನು ಸಾರಿ ತಿಳಿಸುವಾಗಲೂ ಕ್ರಿಸ್ತನ ದೇಹವಾದ ಸಭೆಯು ಆತನೊಂದಿಗೆ ಭಾಗಿಯಾಗಿರುತ್ತದೆ.

ಧರ್ಮಯುಗದ ಪೂರ್ವದಲ್ಲಿನ ಸುವಾರ್ತಾಯುಗದಲ್ಲಿ ವಿಶೇಷವಾಗಿ ನೂತನ ಸೃಷ್ಟಿಯ ನ್ಯಾಯತೀರ್ಪು ಅಥವಾ ದಂಡನೆಯನ್ನು ಗಮನಿಸಲು ಮುಂದುವರೆಯುವ ಮೊದಲು ನಾವು ನಮ್ಮ ಮನಸ್ಸುಗಳಲ್ಲಿ ಈ ಕಾರ್ಯವಿಧಾನಗಳು ಮತ್ತು ತೀರ್ಪು ಇವುಗಳು ಮಗನ ಅಥವಾ ಸಭೆಯ ಮೂಲಕವಾದರೂ ಅವುಗಳೆಲ್ಲವೂ ತಂದೆಯವು ಎಂಬ ಸತ್ಯವು ನಮ್ಮ ಮನಸ್ಸುಗಳಲ್ಲಿ ಆಳವಾದ ಪ್ರಭಾವವನ್ನು ಬೀರಿರಬೇಕು ; ನಾವು ಸತ್ತವರ ಪುನರುತ್ಥಾನದ ಬಗ್ಗೆ, ನಮ್ಮ ಕರ್ತನನ್ನು ತನ್ನ ಸ್ವಂತ ಶಕ್ತಿಯಿಂದ ದೇವರು ಸತ್ತವರೊಳಗಿಂದ ಎಬ್ಬಿಸಿದನು ಮತ್ತು ಆತನು ನಮ್ಮನ್ನು ಸಹಾ ಸತ್ತವರೊಳಗಿಂದ ಎಬ್ಬಿಸುವನು ಎಂಬುದನ್ನು ಓದುವಾಗಲೂ ಈ ಹೇಳಿಕೆಗಳು *“ ನಾನು ಕಡೇ ದಿನದಲ್ಲಿ ಅವನನ್ನು ಎಬ್ಬಿಸುವೆನು”*(ಯೋಹಾನ ೬:೩೯) ಮತ್ತು *“ ನಾನು ಹೋಗಿ ನಿಮಗೆ ಸ್ಥಳವನ್ನು ಸಿದ್ಧಮಾಡಿದ ಮೇಲೆ ತಿರುಗಿ ಬಂದು ನಿಮ್ಮನ್ನು ಕರಕೊಂಡು ಹೋಗಿ ನನ್ನ ಬಳಿಗೆ ಸೇರಿಸಿಕೊಳ್ಳುವೆನು”* (ಯೋಹಾನ ೧೪:೩) ಎಂಬ ನಮ್ಮ ಕರ್ತನ ಪ್ರಕಟನೆಗಳಿಗನುಸಾರ (೧ ಕೊರಿ ೬:೧೪, ಯೋಹಾನ ೧೧:೨೫ ಇವುಗಳನ್ನೂ ನೋಡಿರಿ) ಇರುತ್ತವೆ ಎಂಬುದನ್ನು ಅರಿತಿರಬೇಕು.

ನೂತನ ಸೃಷ್ಟಿಯ ನ್ಯಾಯವಿಚಾರಣೆ ಅಥವಾ ದಂಡನೆ ಇವುಗಳು ಧರ್ಮಯುಗವು ಪೂರ್ಣವಾಗಿ ಪರಿಚಯಗೊಳ್ಳುವ ಮೊದಲೇ ಈ ಸುವಾರ್ತಾ ಯುಗದಲ್ಲಿಯೇ ನೆರವೇರಬೇಕು ; ಯಾಕೆಂದರೆ ಈ ನೂತನ ಸೃಷ್ಟಿ, ಶಿರಸ್ಸು ಮತ್ತು ದೇಹವು ಧರ್ಮಯುಗದ ಕಾರ್ಯಗಳನ್ನು ನೆರವೇರಿಸಬೇಕಾಗಿದೆ. ಇದಕ್ಕೆ ಹೊಂದಿಕೆಯಾಗಿ ನಮ್ಮ ಕರ್ತನು “ಹೀಗಾದರೆ ನೀವು ಲೋಕದವರೊಂದಿಗೆ ನ್ಯಾಯವಿಚಾರಣೆಗೆ ಗುರಿಯಾಗುವುದಿಲ್ಲ” (ಧರ್ಮಯುಗದ ನ್ಯಾಯವಿಚಾರಣೆಯಲ್ಲಿ ಪಾಲುತೆಗೆದುಕೊಳ್ಳುವುದಿಲ್ಲ) ಆದರೆ ಈಗಾಗಲೇ (ಲೋಕದವರಿಂತಲೂ ಮುಂಚೆ) ಮರಣದಿಂದ ಪಾರಾಗಿ ನಿತ್ಯಜೀವಕ್ಕೆ ಸೇರಿದ್ದೀರಿ” ಮತ್ತು “ ನಂಬಿಕೆ ಮತ್ತು ವಿಧೇಯತ್ವದ ಮೂಲಕ ಆತನ ದೇಹದ ಅಂಗಗಳಾಗಿ  ನೀತಿನಿರ್ಣಯ ಹೊಂದಿದ್ದೀರಿ” ಎಂಬಿತ್ಯಾದಿಯಾಗಿ ಪ್ರಕಟಿಸಿದ್ದಾನೆ. ಹಾಗಾದರೆ, ಪ್ರಸ್ತುತ ಕಾಲ, ಪ್ರಸ್ತುತ ಜೀವನ ಇವುಗಳು ಪ್ರತಿಷ್ಠೆಹೊಂದಿದ ಪ್ರತಿಯೊಬ್ಬನಿಗೂ ಆತನ ಪರೀಕ್ಷಾ ದಿನ, ಆತನು ತನ್ನ ಕರೆ ಮತ್ತು ಪ್ರತಿಷ್ಠೆಗನುಸಾರವಾಗಿ ನಿತ್ಯಜೀವಿತಕ್ಕೆ ಅರ್ಹನೋ ಅಲ್ಲವೋ ಎಂಬುದನ್ನು ನಿರ್ಧರಿಸುವ ದಿನವಾಗಿದೆ. ಅಪೋಸ್ತಲನ ಈ ಮಾತುಗಳು ಇದಕ್ಕೆ ಒಪ್ಪಿಗೆಯಾಗಿವೆ –*“ ನ್ಯಾಯವಿಚಾರಣೆಯ ಸಮಯ ಬಂದದೆ ; ಆ ವಿಚಾರಣೆಯು ದೇವರ ಮನೆಯಲ್ಲಿಯೇ ಪ್ರಾರಂಭವಾಯಿತಲ್ಲಾ”* (೧ ಪೇತ್ರ ೪:೧೭). ಅಪೋಸ್ತಲನು ಪ್ರಕಟಿಸುವಂತೆ ಪಾಪವನ್ನು ಯಾರು ತ್ಯಜಿಸಿಬಿಟ್ಟಿದ್ದಾರೋ ಮತ್ತು ತಮ್ಮ ಹೃದಯಗಳನ್ನು ದೇವರ ಚಿತ್ತವನ್ನು ನೆರವೇರಿಸಲು ಸಿದ್ಧಪಡಿಸಿಕೊಂಡಿದ್ದಾರೋ ಅಂಥವರಲ್ಲಿ ದೇವರು ಮೆಚ್ಚಿಕೊಳ್ಳುವಂತ ಉತ್ತಮ ಗುಣಲಕ್ಷಣಗಳು ಉಂಟಾಗುವಂತೆ ಅವರೆಲ್ಲರೂ ಒಂದು ಪರೀಕ್ಷಾಸಮಯವನ್ನು ದಾಟಿಹೋಗಲೇ ಬೇಕಾಗುತ್ತದೆ ಎಂಬುದನ್ನು ಅವರು ಪರಿಗಣಿಸುವಾಗ ಇದು ನೂತನ ಸೃಷ್ಟಿಗೆ ದೇವರ ಅಗತ್ಯತೆಗಳ ಬಗ್ಗೆ ಅಥವಾ ನಿತ್ಯಜೀವದ ಬಗ್ಗೆ ಅವರಿಗೆ ಒಂದು ಉತ್ಕೃಷ್ಟವಾದ ಕಲ್ಪನೆಯನ್ನು ನೀಡುತ್ತದೆ.

### ***ನೂತನ ಸೃಷ್ಟಿಯ ನ್ಯಾಯಾಧಿಪತಿ ಯಾರು? ಮತ್ತು ಅವರು ನ್ಯಾಯತೀರ್ಪನ್ನು ಹೊಂದಿಕೊಳ್ಳಲು ಇರುವ ನಿಯಮ ಮತ್ತು ಮಾನದಂಡಗಳು ಯಾವುವು?***

ನಾವುಗಳು ನಮ್ಮ ಪರಲೋಕದ ತಂದೆಯ ಸಮರ್ಪಕವಾದ ಪ್ರೀತಿಯ ನಿಯಮದಡಿಯಲ್ಲಿ ತೀರ್ಪು ಹೊಂದುತ್ತೇವೆಂದು ನಾವು ಉತ್ತರಿಸುತ್ತೇವೆ. – ನಾವು ಆತನಿಂದಲೇ ನೀತಿನಿರ್ಣಯವನ್ನು ಹೊಂದುತ್ತೇವೆ (“ನೀತಿ ನಿರ್ಣಯವನ್ನು ನೀಡುವಾತನು ದೇವರೇ”). ನಮ್ಮ ದೀಕ್ಷಾ ಪ್ರತಿಜ್ಞಾವಿಧಿಗಳೆಲ್ಲವೂ ಆತನಿಗೆ ಮಾಡಲ್ಪಟ್ಟಿವೆ. ಸಮಗ್ರ ನೂತನ ಸೃಷ್ಟಿಯು, ಶಿರಸ್ಸು ಮತ್ತು ಅದರ ಅಧೀನ ಅಂಗಗಳೆಲ್ಲವೂ ತಂದೆಗೆ ಉತ್ತರದಾಯಿಗಳಾಗಿವೆ.  ಯಾಕೆಂದರೆ,

“ದೇವರೇ ಎಲ್ಲರ ನ್ಯಾಯಾಧಿಪತಿಯಾಗಿದ್ದಾನೆ”. ಆದರೆ ಇದು ನಾವೀಗಾಗಲೇ ನೋಡಿದಂತೆ ದೇವರು ನಮ್ಮೊಡನೆ ಮಾಡುವ ವ್ಯಾವಹಾರದ ಪದ್ದತಿಗಳ ಮಧ್ಯೆಪ್ರವೇಶಿಸಲಾರದು. ಆತನು ನಮ್ಮೊಡನೆ ವ್ಯವಹರಿಸುವಾಗ ಮತ್ತು ನಾವು ಆತನ ಪರಲೋಕದ ಕೃಪಾಸನವನ್ನು ಸಮೀಪಿಸಲು ಅನುಮತಿಸುವ ಕಾರಣವೆಂದರೆ ಆತನು ನಮ್ಮ ಕರ್ತನೂ ಶಿರಸ್ಸೂ ಆಗಿರಿವ ತನ್ನ ಪ್ರೀಯನಿಗೆ ನಾವು ಒಪ್ಪಿಗೆಯಾಗುವಂತೆ ಮಾಡಿದ್ದಾನೆ. ಆತನ ನೀತಿವಂತಿಕೆಯೆಂಬ ನಾರುಮಡಿಯಲ್ಲಿ ಮಾತ್ರವೇ ನಾವು ತಂದೆಯನ್ನು ಸಮೀಪಿಸಬಹುದು ಅಥವಾ ಆತನ ಕೃಪೆಯನ್ನು ಹೊಂದಿಕೊಳ್ಳಬಹುದು. ಪರಂತು ಎಲ್ಲಾ ಬಲವೂ, ಅಧಿಕಾರವೂ ತಂದೆಯ ಪ್ರತಿನಿಧಿಯಾದ ಮಗನ ಸ್ವಾಧೀನದಲ್ಲಿದೆ. ಆದುದರಿಂದ ತಂದೆಯೊಡನೆ ನೇರವಾಗಿ ವ್ಯವಹರಿಸಿದ್ದಾಗ್ಯೂ ಆತನು ನಮಗೆ ಸಂದರ್ಶನವನ್ನು ನಮ್ಮ ಪ್ರತಿಪಾದಕನ ಮೂಲಕ ಮಾತ್ರವೇ ಅನುಗ್ರಹಿಸುವವನಾಗಿದ್ದಾನೆ. ಈ ಲೋಕದ ನ್ಯಾಯಗಳಲ್ಲಿಯೂ ಸಹಾ ವಕೀಲರು ಮಾತ್ರವೇ ತಮ್ಮ ಗ್ರಾಹಕರನ್ನು ಪ್ರತಿನಿಧಿಸುತ್ತಾರೆ. ಈ ಪ್ರಪಂಚಕ್ಕೆ ಧರ್ಮಯುಗದಲ್ಲಿ ತಂದೆಯೊಡನೆ ನೇರವಾದ ಪ್ರವೇಶಾಧಿಕಾರವಾಗಲೀ ವ್ಯವಹಾರವಾಗಲೀ ಇಲ್ಲ. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಅದು ಅಂತ್ಯಗೊಳ್ಳುವವರೆಗೆ ಕ್ರಿಸ್ತನೊಡನೆ ನೇರವಾಗಿ ವ್ಯವಹರಿಸಬಹುದಾಗಿದೆ. ಆಗ ಸಮರ್ಪಕರು ಮಾತ್ರವೇ ತಂದೆಗೆ ಒಪ್ಪಿಸಲ್ಪಡುತ್ತಾರೆ.

ನೂತನ ಸೃಷ್ಟಿಯವರೆಲ್ಲರೂ ತಂದೆಯಿಂದ ಪಡಕೊಂಡವರಾಗಿದ್ದಾರೆ. ಅವರು ಆತನ ಮಕ್ಕಳು, ಕ್ರಿಸ್ತನ ಮಕ್ಕಳಲ್ಲ ; ತಂದೆಯು ಮಾತ್ರವೇ ತಾನು ಅಂಗೀಕರಿಸುವ ಪ್ರತಿಯೊಬ್ಬ ಮಗನನ್ನು ಬೆನ್ನಟ್ಟುವವನಾಗಿದ್ದಾನೆ. ತಂದೆಯ ಕೃಪಾಸನಕ್ಕೇ ನಾವು ಪ್ರಾಥಿಸಬೇಕೆಂಬ ವಿಶೇಷ ಸೂಚನೆಯನ್ನು ನೀಡಲಾಗಿದೆ. ಇದಕ್ಕೆ ಮಾರ್ಗವನ್ನು ನಮ್ಮ ವಿಮೋಚಕನಾದ ಯೇಸುವು ತೆರೆದಿಟ್ಟಿದ್ದಾನೆ. “ನನ್ನ ಮೂಲಕವಲ್ಲದೆ ಯಾರೂ ಸಹಾ ತಂದೆಯ ಬಳಿಗೆ ಬರಲಾರರು” ಎಂಬ ನಮ್ಮ ವಿಮೋಚಕನ ಮಾತುಗಳು ಈಗಲೂ ಕೂಡ ಪೂರ್ಣವಾದ ಅರ್ಥವನ್ನೊಳಗೊಂಡಿದೆ. ಸಭೆಯೊಡನೆ ಕರ್ತನಾದ ಯೇಸುಕ್ರಿಸ್ತನ ಸಂಬಂಧವೆಂದರೆ ಆತನು ಆ ದೇಹದ ಶಿರಸ್ಸಾಗಿದ್ದಾನೆ ಮತ್ತು ಈ ಶಿರಸ್ಸು ತನ್ನ ದೇಹದ ಎಲ್ಲಾ ತಿಳುವಳಿಕೆಗಳನ್ನೂ ತನ್ನ ವಶಕ್ಕೆ ತೆಗೆದುಕೊಂಡು ಅದರ ಹಿತಕ್ಕನುಗುಣವಾಗಿ ನಿರ್ಧರಿಸುತ್ತದೆ. ಅದರ ಎಲ್ಲಾ ಕ್ರಮವನ್ನು ನಿರ್ದೇಶಿಸುತ್ತದೆ, ತಪ್ಪುಗಳನ್ನು ತಿದ್ದುತ್ತದೆ, ನಿವಾರಿಸುತ್ತದೆ ಮತ್ತು ಎಲ್ಲಾ ಸದಸ್ಯರಿಗೂ ಬೆಂಬಲ, ಸಾಮಾನ್ಯವಾದ ನೆರವು, ಬಲ ಮತ್ತು ಸೌಕರ್ಯಗಳನ್ನು ಉಂಟುಮಾಡುತ್ತದೆ. ಇದಕ್ಕಾಗಿ ಅದು ದೇಹದ ಸಹ ಅಂಗಗಳನ್ನು ತನ್ನ ಸೇವಕರನ್ನಾಗಿ ಆಗಿಂದ್ದಾಗ್ಗ್ಯೆ ಉಪಯೋಗಿಸುತ್ತದೆ. ಹೀಗಿದ್ದಾಗ್ಯೂ, ಈ ಕಾರ್ಯದ ಎಲ್ಲಾ ಲಕ್ಷಣಗಳೂ ತಂದೆಯ ಹೆಸರಿನಲ್ಲಿ ಮತ್ತು ಆತನ ನಿರ್ದೇಶನದಂತೆ ನಡೆಯುವದರಿಂದ ಅದು ಮಗನ ಮೂಲಕವಾಗಿ ತಂದೆಯದೆಂದು ಸರಿಯಾದ ರೀತಿಯಲ್ಲಿ ಪರಿಗಣಿಸಲಾಗಿದೆ (೧ ಕೊರಿ ೦೮:೦೬ ನೋಡಿರಿ). .

ಇದಕ್ಕನುಸಾರವಾಗಿ ನಾವು ***“ಪಕ್ಷಪಾತವಿಲ್ಲದೆ ತೀರ್ಪುಮಾಡುವಾತನನ್ನು ನೀವು ತಂದೆಯೆಂದು ಕರೆಯುವವರಾಗಿರಲಾಗಿ . . . . .”*** (೧ ಪೇತ್ರ ೧: ೧೭) ***“ ನಾನೇ ನಿಜವಾದ ದ್ರಾಕ್ಷಿ ಬಳ್ಳೀ, ನನ್ನ ತಂದೆಯು ತೋಟಗಾರನು. ನನ್ನಲ್ಲಿದ್ದು ಫಲಕೊಡದಿರುವ ಕೊಂಬೆಗಳನ್ನು ಆತನು ತೆಗೆದುಹಾಕುತ್ತಾನೆ; ಫಲಕೊಡುವ ಪ್ರತಿಯೊಂದು ಕೊಂಬೆಯು ಹೆಚ್ಚು ಫಲಕೊಡುವ ಹಾಗೆ ಅದನ್ನು ಶುದ್ಧಿಮಾಡುತ್ತಾನೆ ”***(ಯೋಹಾನ ೧೫:೧-೨) ಎಂಬಿತ್ಯಾದಿಯಾಗಿ ಓದುತ್ತೇವೆ. ಪರಂತು ಶಿರಸ್ಸಿನ ಈ ಮಧ್ಯಸ್ತಿಕೆಯು ಪೂರ್ಣವಾಗಿ ಮಾನ್ಯಮಾಡಲ್ಪಟ್ಟಿದೆ ಮತ್ತು ಈ ತಿದ್ದುಪಾಡು (ಶುದ್ಧೀಕರಿಸುವಿಕೆ), ತೆಗೆದುಹಾಕುವಿಕೆ ಮುಂತಾದವುಗಳು ನಮ್ಮಲ್ಲಿ ತಂದೆಯ ನಿಯೋಗಿಯಾದ ಆತನ ಮೂಲಕವಾಗಿ ನೆರವೇರುತ್ತವೆ. ಇದು ಅಪೋಸ್ತಲನ ಈ ಮಾತುಗಳಲ್ಲಿ ನೆರವೇರಿದೆ – ***“ ಜೀವಸ್ವರೂಪನಾದ ದೇವರ ಕೈಯಲ್ಲಿ ಸಿಕ್ಕಿ ಬೀಳುವುದು ಭಯಂಕರವಾದದ್ದು”*** (ಇಬ್ರಿಯ ೧೦: ೩೧). ಆದುದರಿಂದ ನಾವು ನೇರವಾಗಿ ಜೀವಸ್ವರೂಪನಾದ ದೇವರ ಕೈಗಳಲ್ಲಿಲ್ಲ ಅಥವಾ ಬಗ್ಗಿಸಲಾಗದ ಧರ್ಮಶಾಸ್ತ್ರದ ನೇರ ನೆರವೇರಿಕೆಗೂ ಒಳಪಡುವವರಲ್ಲವೆಂದು ಆತನು ಬೋಧಿಸುವವನಾಗಿದ್ದಾನೆ. ನಾವು ಕರ್ತನಾದ ಯೇಸುವಿನಲ್ಲಿದ್ದೇವೆ ಹಾಗೂ ಆತನ

ಅರ್ಹತೆಯಿಂದ ಮುಚ್ಚಿದವರಾಗಿದ್ದೇವೆ ಮತ್ತು ಆತನೇ ನಮ್ಮ ಶಿರಸ್ಸು ಅಥವಾ ಒಡೆಯನಾಗಿ ನಮ್ಮೊಡನೆ ವ್ಯವಹರಿಸುವವನಾಗಿದ್ದಾನೆ. ಅದು ಅಬ್ರಹಾಮನ ಒಡಂಬಡಿಕೆಯು ಕರುಣೆಯ ನಿಮಿತ್ತ ಆತನ ರಕ್ತದ ಮೂಲಕ ನಮ್ಮಲ್ಲಿ ನೆರವೇರುವುದಾಗಿದೆ.

## ಭವ್ಯವಾದ ಶಿರಸ್ಸು ದೇಹದ ಮೇಲ್ವಿಚಾರಣೆಯನ್ನು ಮಾಡುವುದಾಗಿದೆ

ದೇಹ ಅಥವಾ ಮದಲಗಿತ್ತಿಯಾದ ತನ್ನ ಸಭೆಯ ವಿಚಾರದಲ್ಲಿ ನಮ್ಮ ಮಹಿಮೆಯುಳ್ಳ ಶಿರಸ್ಸಿನ ಪ್ರೀತಿ ಮತ್ತು ಪಾಲನೆಯ ಬಗ್ಗೆ ಆತನು ಯಾವುದೇ ಸ್ಪಷ್ಟವಾದ ಪ್ರಕಟನೆಯನ್ನು ನೀಡಿಲ್ಲವಾದರೂ ನಾವು ಅವನ್ನು ಸಂದೇಹಿಸುವಂತಿಲ್ಲ. ಇಂತಿದ್ದರೂ ಆತನು ತನ್ನ ಪ್ರೀಯರಿಗೆ ನೀಡಿದ ಅಂತಿಮ ಸಂದೇಶದಲ್ಲಿ ಪರಿಶೋಧಿಸುವವನೂ ಮತ್ತು ಶುದ್ಧೀಕರಿಸುವವನೂ ಆದ ರಾಜ ಯಾಜಕ ವರ್ಗದ ಲೇವಿಯ ಪ್ರತಿಸಂಕೇತವೂ ಆಗಿ ಕೂತುಕೊಳ್ಳುವಾತನು ತಾನೇ ಎಂದು ನಿರ್ಧಿಷ್ಟವಾಗಿ ತೋರಿಸಿಕೊಟ್ಟಿದ್ದಾನೆ. ಒಂದೇ ಸಭೆಯ ಅನುಭದಲ್ಲಿರುವ ಏಳು ಗಮನಾರ್ಹ ಸಂಗತಿಗಳ ಪ್ರತಿನಿಧಿಗಳಂತಿರುವ ಆಸ್ಯಾ ಸೀಮೆಯ ಏಳು ಸಭೆಗಳಿಗೆ ಆತನು ನುಡಿದಿದ್ದನ್ನು ಕೇಳಿಸಿಕೊಳ್ಳಿರಿ – ***“ ನಾವು ನಿಮಗೆ ಜೀವವೆಂಬ ಜಯಮಾಲೆಯನ್ನು ಕೊಡುವೆನು” . . . .*** ನಾನು ಕೆಲವು ವಿಷಯಗಳಲ್ಲಿ ನಿಮ್ಮವಿರೋಧವಾಗಿ ತಪ್ಪು ಹೊರಿಸಬೇಕಾಗುತ್ತದೆ . . . . . . ಪಶ್ಚಾತ್ತಾಪಪಟ್ಟು ದೇವರ ಕಡೆ ತಿರುಗಿಕೋ, ತಿರುಗಿಕೊಳ್ಳದಿದ್ದರೆ ನಾನು ಬೇಗನೇ ಬಂದು ನನ್ನ ಬಾಯ ಕತ್ತಿಯಿಂದ ನಿಮ್ಮ ಮೇಲೆ ಯುದ್ಧಮಾಡುವೆನು . . . . . ಯಾವನು ಜಯ ಹೊಂದುತ್ತಾನೋ ಅವನಿಗೆ ಬಚ್ಚಿಟ್ಟಿರುವ ಮನ್ನವೆಂಬ ಆಹಾರವನ್ನು ಕೊಡುವೆನು . . . . ನಿನ್ನ ಮೇಲೆ ಒಂದು ತಪ್ಪು ಹೊರಿಸಬೇಕಾಗುತ್ತದೆ, ಅದೇನೆಂದರೆ ಯೆಜ಼ೆಬೇಲೆಂಬ ಹೆಂಗಸು . . . ಅವರನ್ನು ತಪ್ಪಾದ ಮಾರ್ಗದಲ್ಲಿ ಸೇರಿಸುತ್ತಿರುವಲ್ಲಿ ನೀನು ಅವಳನ್ನು ತಡೆಯದೇ ಬಿಟ್ಟದ್ದೀ . . . ದೇವರ ಕದೆ ತಿರುಗಿಕೊಳ್ಳುವುದಕ್ಕೆ ನಾನು ಅವಳಿಗೆ ಸಮಯವನ್ನು ಕೊಟ್ಟೆನು . . . . ಅವಳ ಕೃತ್ಯಗಳನ್ನು ಬಿಟ್ಟುಬಿಡದೆ ಹೋದರೆ ಮಹಾಸಂಕಟದಲ್ಲಿ ಬೀಳುವಂತೆ ಮಾಡುವೆನು . . . ಅವಳ ಮಕ್ಕಳನ್ನು ಕೊಂದೇ ಕೊಳ್ಳುವೆನು; ಆಗ ನಾನು ಮನುಷ್ಯರ ಅಂತರೇಂದ್ರಿಯವನ್ನೂ, ಹೃದಯವನ್ನೂ ಪರೀಕ್ಷಿಸುವವನಾಗಿದ್ದೇನೆಂಬುದು ಎಲ್ಲಾ ಸಭೆಗಳಿಗೆ ಗೊತ್ತಾಗುವುದು. ನಿಮ್ಮಲ್ಲಿ ಪ್ರತಿಯೊಬ್ಬನಿಗೆ ಅವನವನ ಕೃತ್ಯಗಳಿಗೆ ತಕ್ಕ ಹಾಗೆ ಪ್ರತಿಫಲ ಕೊಡುವೆನು . . . ಯಾವನು ಜಯಶಾಲಿಯಾಗಿದ್ದು ನನಗೆ ಮೆಚ್ಚಿಗೆಯಾದ ಕೃತ್ಯಗಳನ್ನು ಕಡೇವರೆಗೂ ನಡೆಸುತ್ತಾನೋ ಅವನಿಗೆ ನಾನು ನನ್ನ ತಂದೆಯಿಂದ ಹೊಂದಿದ ಅಧಿಕಾರದಂತೆ ಜನಾಂಗಗಳ ಮೇಲೆ ಅಧಿಕಾರವನ್ನು ಕೊಡುವೆನು . . . . . ನನ್ನ ದೇವರ ಮುಂದೆ ನಿನ್ನ ಕೃತ್ಯಗಳಲ್ಲಿ ಒಂದಾದರೂ ಸಂಪೂರ್ಣವಾದದ್ದೆಂದು ನಾನು ಕಾಣಲಿಲ್ಲ . . . ಜೀವಬಾಧ್ಯರ ಪಟ್ಟಿಯಿಂದ ಅವನ ಹೆಸರನ್ನು ನಾನು ಅಳಿಸಿಬಿಡುವುದಿಲ್ಲ . . . . ಈ ಮಾತುಗಳನ್ನು ಪರಿಶುದ್ಧನೂ ಸತ್ಯವಂತನೂ ದಾವೀದನ ಬೀಗದಕ್ಕೈಯುಳ್ಳವನೂ ಯಾರೂ ಮುಚ್ಚದಂತೆ ತೆರೆಯುವವನೂ ಯಾರೂ ತೆರೆಯದಂತೆ ಮುಚ್ಚುವವನೂ ಹೇಳುವುದೇನೆಂದರೆ . . . ತಾವು ಯೆಹೂದ್ಯರೆಂದು ಸುಳ್ಳಾಗಿ ಕೊಚ್ಚಿಕೊಳ್ಳುವ ಸೈತಾನನ ಸಮಾಜದವರಲ್ಲಿ ಕೆಲವರು ಬಂದು ನಿನ್ನ ಪಾದಗಳ ಮುಂದೆ ಬೀಳುವಂತೆಯೂ ನಿನ್ನನ್ನು ನಾನು ಪ್ರೀತಿಸಿದ್ದನ್ನು ತಿಳುಕೊಳ್ಳುವಂತೆಯೂ ಮಾಡುವೆನು. ನೀನು ನನ್ನ ಸಹನವಾಕ್ಯವನ್ನು ಕಾಪಾಡಿದ್ದರಿಂದ ಭೂನಿವಾಸಿಗಳನ್ನು ಪರೀಕ್ಷಿಸುವುದಕ್ಕಾಗಿ ಲೋಕದ ಮೇಲೆಲ್ಲಾ ಬರುವುದಕ್ಕಿರುವ ಶೋಧನೆಯ ಸಮಯದಲ್ಲಿ ನಿನ್ನನ್ನು ತಪ್ಪಿಸಿ ಕಾಪಾಡುವೆನು. . . . . .ಯಾವನು ಜಯಹೊಂದುತ್ತಾನೋ ಅವನನ್ನು ನನ್ನ ದೇವರ ಆಲಯದಲ್ಲಿ ಸ್ಥಂಭವಾಗಿ ನಿಲ್ಲಿಸುವೆನು” . . . . “ ನೀನು ಬೆಚ್ಚಗೂ ಇಲ್ಲದೆ ತಣ್ಣಗೂ ಇಲ್ಲದೆ ಉಗುರು ಬೆಚ್ಚಗಿರುವುದರಿಂದ ನಿನ್ನನ್ನು ನನ್ನ ಬಾಯೊಳಗಿಂದ ಕಾರುವೆನು” . . . . “ ನೀನು ಐಶ್ವರ್ಯವಂತನಾಗುವಂತೆ ಬೆಂಕಿಯಲ್ಲಿ ಪುಟಾಹಾಕಿದ ಚಿನ್ನವನ್ನು ನನ್ನಿಂದ ಕೊಂಡುಕೊಳ್ಳಬೇಕೆಂದು ನಿನಗೆ ಬುದ್ಧಿಹೇಳುತ್ತೇನೆ” . . . “ನಾನ್ಯ್ ಯಾರಾರನ್ನು ಪ್ರೀತಿಸುತ್ತೇನೋ ಅವರನ್ನು ಗದರಿಸುತ್ತೇನೆ ಮತ್ತು ಶಿಕ್ಷಿಸುತ್ತೇನೆ. ಆದದರಿಂದ ನೀನು ಆಸಕ್ತನಾಗಿರು ; ದೇವರ ಕಡೆ ತಿರುಗಿಕೋ” (ಪ್ರಕಟನೆ ೨ ಮತ್ತು ೩ ನೇ ಅಧ್ಯಾಯದಲ್ಲಿ ಈ ಮಾತುಗಳನ್ನು ಕಂಡುಕೊಳ್ಳಿರಿ).

ಕರ್ತನ ಮೊಹರಿ ಮತ್ತು ತಲಾಂತುಗಳ ಸಾಮ್ಯಗಳನ್ನು ನಾವು ನಮ್ಮ ಮನಸ್ಸಿಗೆ ತಂದುಕೊಳ್ಳೋಣ. ಇವೆರಡರಲ್ಲಿಯೂ ಆತನು ತನ್ನ ಎರಡನೆಯ ಬರೋಣದಲ್ಲಿ ಪ್ರಮಾಣಿಕರನ್ನು ಬಹುಮಾನಿಸುತ್ತಾನೆಂಬುದು ಕಂಡುಬರುತ್ತದೆ. ಮಹಿಮೆ, ಗೌರವ ಮತ್ತು ನಿರ್ಲಯತ್ವಗಳನ್ನು ಯಾರು ತಾಳ್ಮೆಯಿಂದ ಅವಿರತವಾಗಿ ಬಯಸುತ್ತಾರೋ ಅವರಿಗೆ ಆತನು ನಿತ್ಯಜೀವವನ್ನು ಇತರರಿಗೆ ಕ್ರೋಧದ ದಿನದಲ್ಲಿ ಕ್ರೋಧವನ್ನು ದಯಪಾಲಿಸುವನು. ಈ ಸಾಮ್ಯಗಳು ಸೇವಕರಿಗೆ ಅವರ ಪ್ರಮಾಣಿಕತೆಯ ಪ್ರಮಾಣಕ್ಕನುಸಾರವಾಗಿ ಬಹುಮಾನಗಳ ವಿತರಣೆಯ ಸ್ಪಷ್ಟ ಚಿತ್ರಣವನ್ನು ನೀಡುತ್ತವೆ. ಇಲ್ಲಿ ಒರ್ವ ಶ್ರೀಮಂತನಾದ ಯವನಸ್ತನು ತನ್ನ ರಾಜಾಧಿಕಾರದಿಂದ ತೊಡಗಿಸಿದ ಹಣವನ್ನು ಕ್ರಮೇಣವಾಗಿ ಆತನ ವೈರಿಗಳು ವ್ಯವಹರಿಸುತ್ತಾರೆ. ಹೀಗಿದ್ದರೂ ಅಪೋಸ್ತಲನು ಬಹುಮಾನ ನೀಡುವುದನ್ನೂ ಅಥವಾ ಶಿಕ್ಷೆಗೊಳಪಡಿಸುವುದನ್ನೂ ತಂದೆಗೆ ಹೊರಿಸುತ್ತಾನೆ. ಈ ಸಂಗತಿಗಳ ಕೀಲಿಕೈಯು “ ನಾನು ನನ್ನ ತಂದೆಯೂ ಒಬ್ಬನೇ ಆಗಿದ್ದೇವೆ ಮತ್ತು ನಾವು ಎಲ್ಲಾ ವಿಷಯಗಳಲ್ಲಿಯೂ ಅನ್ಯೂನ್ಯತೆಯಿಂದ ವರ್ತಿಸುತ್ತೇವೆ” ಎಂಬ ನಮ್ಮ ಕರ್ತನ ಮಾತುಗಳಲ್ಲಿದೆ.

*“ತೀರ್ಪುಮಾಡಬೇಡಿರಿ ; ಹಾಗೆ ನಿಮಗೂ ತೀರ್ಪಾಗುವುದಿಲ್ಲ.*
*ನೀವು ಮಾಡುವ ತೀರ್ಪಿಗೆಸರಿಯಾಗಿ ನಿಮಗೂ ತೀರ್ಪಾಗುವುದು”*
*– ಮತ್ತಾಯ ೭ :೧-೨ –*

ಸಭೆಯ ದಕ್ಷ ನ್ಯಾಯಾಧಿಪತಿಗಳೆಂದರೆ ತಂದೆ ಮತ್ತು ಕುಮಾರ – ಎರಡನೆಯವನು ತಂದೆಯ ಪ್ರತಿನಿಧಿಯಾಗಿದ್ದಾನೆ ಮತ್ತು ಈತನ ವಶಕ್ಕೆ ತಂದೆಯು ಎಲ್ಲಾ ನ್ಯಾಯವಿಚಾರಣೆಗಳನ್ನೂ ವಹಿಸಿದ್ದಾನೆ. (ಯೊಹಾನ ೫:೨೨, ೨೭ ನೋಡಿರಿ). ನೂತನ ಸೃಷ್ಟಿಗಳು ಒಬ್ಬರನ್ನೊಬ್ಬರು ತೀರ್ಪುಮಾಡಲು ಅರ್ಹರಲ್ಲವೆಂಬುದಕ್ಕೆ ಎರಡು ಕಾರಣಗಳಿವೆ – (೧) ಎಲ್ಲರನ್ನೂ ಆಳುವ ದೈವಿಕ ಪ್ರೀತಿಯ ನಿಯಮದ ಬಗ್ಗೆ ಅವರಲ್ಲಿ ಯಾರೊಬ್ಬರೂ ಸ್ಪಷ್ಟವಾಗಿ ತಿಳಿದಿರುವುದಿಲ್ಲ ಮತ್ತು ಅದನ್ನು ಸರಿಯಾಗಿ ಮೆಚ್ಚಿಕೊಳ್ಳುವುದಿಲ್ಲ (೨) ಯಾರೂ ತಮ್ಮ ಸ್ವಂತ ಹೃದಯಗಳನ್ನು ತಪ್ಪುಗಳಿಲ್ಲದೆ ಸ್ಪಷ್ಟವಾಗಿ ಓದಿಕೊಳ್ಳಲಾರರು ; ಹೆಚ್ಚಿನವರು ತಮ್ಮನ್ನು ಬಹಳ ಕಠಿಣವಾಗಿಯಾಗಲೀ, ಅತ್ಯಂತ ದಯಾಪರತೆಯಿಂದಾಗಿಯಾಗಲೀ ಶಿಕ್ಷಿಸಿಕೊಳ್ಳಲಾರರು. ಆದುದರಿಂದ ಅವರು ಇತರರ ಹೃದಯದ ಬಗ್ಗೆ ತೀರ್ಪುನೀಡುವುದನ್ನು ಸಭ್ಯವಾಗಿ ನಿರಾಕರಿಸಬೇಕು. ಅವರ ಉದ್ದೇಶಗಳು ಮೆಚ್ಚಿಕೊಳ್ಳುವುದಕ್ಕೂ ಬಹಳ ದೂರವಿದ್ದಿರಬಹುದು. ತೀರ್ಪುಮಾಡಲು ಇರುವ ನಮ್ಮ ಅನರ್ಹತೆಯ ಕಾರಣ ಮೊದಲ ಪುನರುತ್ಥಾನದಲ್ಲಿ ಭಾಗಗೊಂಡು ಅರ್ಹತೆಪಡಕೊಂಡ ನಂತರ ಭವಿಷ್ಯದಲ್ಲಿ ಆತನ ರಾಜ್ಯದಲ್ಲಿ ಇದು ನಮ್ಮ ಕರ್ತವ್ಯಗಳಲ್ಲಿ ಒಂದಾಗಿದೆ ಎಂದು ನಮ್ಮ ಕರ್ತನು ನಮಗೆ ಭರವಸೆನೀಡುವವನಾಗಿದ್ದಾನೆ. – ಈಗ ಆತನ ಅನುಯಾಯಿಗಳ ಮಧ್ಯೆ ತೀರ್ಪುಮಾಡುವುದನ್ನು ಪ್ರತಿಬಂಧಿಸುತ್ತಾನೆ ಮತ್ತು ಈಗ ಅವರು ಒಬ್ಬರನ್ನೊಬ್ಬರು ತೀರ್ಪುಮಾಡಲು ಪಟ್ಟು ಹಿಡಿಯುವುದಾದಲ್ಲಿ ಅವರು ಇತರರಿಗೆ ತೋರುವ ಕರೂಣೆ ಮತ್ತು ಉಧಾರತೆಗಳಿಗಿಂತ ಹೆಚ್ಚಾದುದನ್ನು ನಿರೀಕ್ಷಿಸಲಾಗದು ಎಂಬ ಎಚ್ಚರಿಕೆಯನ್ನು ನೀಡುವವನಾಗಿದ್ದಾನೆ. (ಮತ್ತಾಯ ೭:೨ ; ಲೂಕ ೬:೩೮ ನೋಡಿರಿ). ಇದೇ ಉದಾಹರಣೆಯನ್ನು ನಮಗೆ ಕಲಿಸಿಕೊಟ್ಟ ಮಾದರಿ ಪ್ರಾರ್ಥನೆಯಲ್ಲಿರುವ “ ***ನಮಗೆ ತಪ್ಪು ಮಾಡಿದವರನ್ನು ನಾವು ಕ್ಷಮಿಸಿದಂತೆ ನಮ್ಮ ತಪ್ಪುಗಳನ್ನೂ ಕ್ಷಮಿಸು”*** (ಮತ್ತಾಯ ೬:೧೨) ಮಾತುಗಳಲ್ಲಿ ನೋಡಬಹುದಾಗಿದೆ.

ನಮ್ಮ ಕರ್ತನು ನಾವು ಇತರರೊಂದಿಗೆ ಅನ್ಯಾಯವಾಗಿ ಮತ್ತು ಧಾರಾಳವಲ್ಲದಂತೆ ಮಾಡಿದಲ್ಲಿ ನಮ್ಮ ಕರ್ತನೂ ಸಹಾ ಅದೇ ರೀತಿಯಲ್ಲಿ ನಮಗೆ ಮಾಡುವ ಒಂದು ನಿರಂಕುಶವಾದ ನಿಯಮ ಇದಾಗಿರುವುದಿಲ್ಲ. ಬದಲಾಗಿ ಇದು ಒಂದು ಸರಿಯಾದ ತತ್ವನ್ನೊಳಗೊಂಡಿದೆ. ನಾವು ಸ್ವಾಭಾವಿಕವಾಗಿ ಕ್ರೊಧದ ಮಕ್ಕಳಾಗಿದ್ದೇವೆ – “ನಾಶನಕ್ಕಾಗಿಯೇ ಅರ್ಹರಾದ ಪಾತ್ರೆಗಳು”. ಕರ್ತನು ಕರುಣೆಯಿಂದ ನಮ್ಮನ್ನು ಆಶೀರ್ವದಿಸುವ ಹಾಗೂ ಪಾಪ ಮತ್ತು ಬಲಹೀನತೆ

ಇವುಗಳಿಂದ ನಮ್ಮನ್ನು ಬಿಡುಗಡೆ ಮಾಡಲು ಮತ್ತು ವಿಮೋಚಕನ ಮೂಲಕ ನಮ್ಮನ್ನು ಸಮರ್ಪಕರನ್ನಾಗಿ ಮಾಡಲು ಉದ್ದೇಶಿಸಿರುವನಾದರೂ ಇದನ್ನು ಆತನು ನಾವು ಆತನ ಪ್ರೀತಿಯ ನಿಯಮವನ್ನು ಅಂಗೀಕರಿಸುವ ಮತ್ತು ಹೃತ್ಪೂರ್ವಕವಾಗಿ ಅದನ್ನು ಧೃಢಪಡಿಸುವ ಶರತ್ತಿನ ಮೇಲೆ ಮಾಡುವವನಾಗಿದ್ದಾನೆ. ಪುನರುಜ್ಜೀವನಗೊಳಿಸದ ಮಕ್ಕಳನ್ನು ಅಂಗೀಕರಿಸಿ ಆ ಮೂಲಕ ಕ್ರೋಧದ ಮಕ್ಕಳನ್ನು ತನ್ನ ಕುಟುಂಬದಲ್ಲಿ ಪಡಕೊಳ್ಳುವ ಪ್ರಸ್ತಾಪ ಆತನ ಬಳಿಯಲ್ಲಿಲ್ಲ. ಅನೇಕ ಬಿಡಾರಗಳಿರುವ ತಂದೆಯ ಮನೆಯಲ್ಲಿ (ಯೋಹಾನ ೧೪:೨ ನೋಡಿರಿ) ಯಾವುದಾದರೂ ಒಂದು ಸ್ಥಳಕ್ಕೆ ಯೋಗ್ಯರಾಗಲು ಪ್ರತಿಯೊಬ್ಬರೂ ಕ್ರೋಧದ ಮಕ್ಕಳಾಗುವುದನ್ನು ತೊರೆದು ಪ್ರೀತಿಯ ಮಕ್ಕಳಾಗಬೇಕು – ನಮ್ಮ ಕರ್ತನ ಆತ್ಮನ ಮೂಲಕವಾಗಿ ಮಹಿಮೆಯಿಂದ ಮಹಿಮೆಗೆ ಬದಲಾಗುತ್ತಾ ಹೋಗಬೇಕು. ಆದುದರಿಂದ ಪ್ರೀತಿಯ ಸ್ಪೂರ್ತಿಯನ್ನು ಅಭಿವೃದ್ಧಿಗೊಳಿಸಲು ನಿರಾಕರಿಸುವ ಯಾರೇ ಆಗಲೀ ಮತ್ತು ಅದಕ್ಕೆ ವ್ಯತಿರಿಕ್ತವಾಗಿ ಜೊತೆ ಶಿಷ್ಯರನ್ನು ಸಹಾನುಭೂತಿಯಿಲ್ಲದೆ ತೀರ್ಪುಮಾಡಲು ಆಗ್ರಹಪಡುತ್ತಾರೋ ಅಂತವರು ತಾವು ಜ್ಞಾನ ಮತ್ತು ಕೃಪೆಯ ಅನುಭವದಲ್ಲಿ ಬೆಳೆಯುತ್ತಿಲ್ಲವೆಂದು, ಮಹಿಮೆಯಿಂದ ಮಹಿಮೆಗೆ ದೇವರ ಮನಸ್ಸಿನೋಪಾದಿಯಲ್ಲಿ ಬದಲಾಗುತ್ತಿಲ್ಲವೆಂದು, ದೇವರ ನಿಜವಾದ ಅನುಯಾಯಿಗಳಲ್ಲವೆಂದು ಸಾಬೀತುಪಡಿಸುತ್ತಾರೆ. ಆದುದರಿಂದ ತಾವು ಕರ್ತನನ್ನು ಅನುಸರಿಸುವುದರಿಂದ ತಮ್ಮ ಮೇಲೆ ವಿಸ್ತರಿಸಲ್ಪಡುವ ಆತನ ಕರುಣೆಯನ್ನು ಹೊಂದಿಕೊಳ್ಳುವುದಿಲ್ಲ. ಆತನು ದೇವರಂತೆ (ಪ್ರೀತಿಯಲ್ಲಿ) ಇರುವ ಪ್ರಮಾಣವು ಆತನ ಕರುಣೆ, ಅಲೋಚನೆಗಳ ಉದಾರತೆ, ತನ್ನ ಸಂಗಡಿಗರ ಬಗ್ಗೆ ಆತನ ಮಾತು ಮತ್ತು ಕ್ರೀಯೆಗಳಲ್ಲಿ ಕಂಡುಬರುತ್ತದೆ.

ಹೋ! ತೀರ್ಪುಮಾಡುವ (ದೋಷಾರೋಪಣೆ ಮಾಡುವ ) ಈ ಉತ್ಸಾಹವನ್ನು ಆತ್ಮನಿಂದ ಪಡಕೊಂಡವರಾದ 'ನೂತನ ಸೃಷ್ಟಿ'ಗಳೆಲ್ಲರೂ ಗ್ರಹಿಸಿಕೊಳ್ಳಬೇಕು. ಅಯ್ಯೋ! ಅವರಲ್ಲಿ ಸಾಮಾನ್ಯ ಪ್ರಮಾಣದಲ್ಲಿ ಪ್ರೀತಿಯ ಆತ್ಮನ ಕೊರತೆಯಿದೆ (ನಿಜವಾಗಿಯೂ ಇದು ದೇವಜನರನ್ನು ಸುತ್ತುವರಿದ ಪಾಪವಾಗಿದೆ). ಅವರಲ್ಲಿ ಕ್ರಿಸ್ತನ ಆತ್ಮನ ಕೊರತೆಯಿದೆ "***ಯಾವನಿಗಾದರೂ ಕ್ರಿಸ್ತನ ಆತ್ಮನ ಇಲ್ಲದಿದ್ದರೆ ಅವನು ಕ್ರಿಸ್ತನವನಲ್ಲ***" (ರೋಮ ೮:೯). ಈ ಸತ್ಯ ಸಂಗತಿಗಳು ಎಷ್ಟು ಬೇಗ ಗ್ರಹಿಸಲ್ಪಡುತ್ತದೆಯೋ ಅಷ್ಟೇ ಬೇಗ ಮಹಾ ಪರಿವರ್ತನೆಯುಂಟಾಗುತ್ತದೆ ಮಹಿಮೆಯಿಂದ ಮಹಿಮೆಗೆ. ಇದು ನೂತನ ಸೃಷ್ಟಿಗಳಾಗಿ ನಾವು ಅಂತಿಮವಾಗಿ ಅಂಗೀಕರಿಸಲ್ಪಡುವುದಕ್ಕೆ ಬಹಳಷ್ಟು ಅಗತ್ಯವಾಗಿದೆ.

ಆದರೆ ನಮ್ಮ ದೇವಜರಲ್ಲಿ ಬಹಳಷ್ಟು ಮಂದಿಗೆ ತಾವು ಏಷ್ಟರ ಮಟ್ಟಿಗೆ ಆದೂ ಕಠೋರವಾದ ರೀತಿಯಲ್ಲಿ ಇತರರನ್ನು ತೀರ್ಪುಮಾಡುತ್ತೇವೆಂದು ಅರಿಯರು. ಇದನ್ನೇ ಕರ್ತನು ಅವರಿಗೆ ಅನ್ವಯಿಸಿದಲ್ಲಿ ಖಂಡಿತವಾಗಿಯೂ ಅವರು ದೇವರ ರಾಜ್ಯದಿಂದ ನಿಷೇದಿಸಲ್ಪಡುತ್ತಾರೆ. ನಮ್ಮ ಕರ್ತನ ಉಧಾರವಾದ ವಾಗ್ದಾನಗಳ ಅಡಿಯಲ್ಲಿ ನಾವು ಇತರರನ್ನು ಎಷ್ಟು ಉಧಾರವಾಗಿ ತೀರ್ಪುಮಾಡುತ್ತೇವೆಯೋ ಅಷ್ಟೇ ಉಧಾರವಾಗಿ ನಮಗೂ ತೀರ್ಪಾಗುತ್ತದೆಂದು ನಾವು ಭಯಪಡುವವರಾಗಿದ್ದಿರಬಹುದು. ಇಂಥಾಃ ಧೋರಣೆಯು ಬಹಳಷ್ಟು ಔದರ್ಯವುಳ್ಳದ್ದೂ, ಕರುಣೆಯಿಂದ ತುಂಬಿದ್ದೂ ಆಗಿದೆ. "ಕೆಟ್ಟದನ್ನು ಅಲೋಚಿಸಬೇಡಿ" ಎಂಬುದು ಅತಿರೇಖಕ್ಕೆ ಕೊಂಡೊಯ್ಯಬಹುದು. ಆದರೆ ಇಲ್ಲ! ನಮ್ಮ ಪತನದ ಪ್ರಭಾವದ ಎಲ್ಲಾ ಶಕ್ತಿಗಳೂ ವಿರುದ್ಧ ದಿಕ್ಕಿನಲ್ಲಿ ಭಧ್ರವಾಗಿ ನೆಲೆಗೊಂಡಿವೆ. ನಾವು ಇತರರನ್ನು ತೀರ್ಪುಮಾಡಿದಂತೆಯೇ ನಮಗೂ ತೀರ್ಪುಮಾಡಲಾಗುವುದೆಂಬ ಈ ಉದಾರವಾದ ಕೊಡುಗೆಯನ್ನು ನಮ್ಮ ಕರ್ತನು ಮಾಡಿ ಹದಿನೆಂಟು ಶತಮಾನಗಳೇ ಗತಿಸಿಹೋದವು. ಆದಾಗ್ಯೂ ಈ ವಾಗ್ದಾನದಡಿಯಲ್ಲಿ ಜನರು ಹೇಗೆ ಕರುಣೆಯನ್ನು ಆಗ್ರಹಿಸುತ್ತಿಲ್ಲ! ಇತರರನ್ನು ತೀರ್ಮಾನಿಸುವ ಬಗ್ಗೆ ನಮ್ಮ ಅಲೊವನ್ನು ಪರೀಕ್ಷಿಸಿಕೊಳ್ಳುವುದು ನಮಗೆ ಲಾಭದಾಯಕ. ನಾವಿದನ್ನು ಪ್ರಾರ್ಥನಾಪೂರ್ವಕವಾಗಿ ಮಾಡೋಣ.

ಪತನಗೊಂಡ ಇಲ್ಲವೆ ವಿಷಯಲಂಪಟವಾದ ಮನಸ್ಸು ಸ್ವಾರ್ಥವಾದುದು ; ಅನುಪಾತವಾಗಿ ಅದು ಸ್ವಾರ್ಥಕ್ಕಾಗಿರುವುದರಿಂದ ಅದು ಇತರರಿಗೆ ವಿರುದ್ಧವಾಗಿವೆ. ಸ್ವಾರ್ಥವನ್ನು ಒಪ್ಪುವ ಮತ್ತು ಇತರರನ್ನು ಒಪ್ಪದ ಅಥವಾ ಖಂಡಿಸುವ ಒಲವು ತೋರುತ್ತದೆ. ನಾವು ಕಣ್ಣು ಮಿಟಿಕಿಸುವಾಗಲೂ, ಉಸಿರಾಡುವಾಗಲೂ ಸಾಧ್ಯಂತವಾಗಿ

ಇದು ಒಂದು ಅರಿವಿಲ್ಲದ ಅಭ್ಯಾಸವಾಗಿ ಬೆಳೆದುಬಿಟ್ಟಿದೆ. ಈ ಅಭ್ಯಾಸವು ಉನ್ನತ ಶಿಕ್ಷಣದೊಂದಿಗೆ ಹೆಚ್ಚಾಗಿ ಉಚ್ಚರಿಸಲಾಗುತ್ತಿದೆ. ಮನಸ್ಸು ಉನ್ನತವಾದ ಆದರ್ಶವನ್ನು ಮತ್ತು ಮಟ್ಟವನ್ನು ಗ್ರಹಿಸುತ್ತದೆ ಮತ್ತು ಪ್ರತಿಯೊಬ್ಬರನ್ನು ಇನ್ನುಮುಂದೆ ಇದರ ಮೂಲಕವಾಗಿ ಅಳೆಯುತ್ತದೆ. ನಿಜವಾಗಿಯೂ ಎಲ್ಲದರಲ್ಲಿಯೂ ತಪ್ಪು ಹುಡುಕುತ್ತದೆ. ಇತರರ ತಪ್ಪುಗಳನ್ನು, ಬಲಹೀನತೆಗಳನ್ನು ತಿರುಗಿಹೇಳುವುದರಲ್ಲಿ ಅದು ಸಂತೋಷಿಸುತ್ತದೆ. ಆದರೆ ಅದೇ ಸಮಯದಲ್ಲಿ ತಮ್ಮ ಇಂಥಾಃ ಅಥವಾ ಬೇರೆ ರೀತಿಯ ತಪ್ಪುಗಳನ್ನು ನಿರ್ಲಕ್ಷಿಸಿಬಿಡುತ್ತದೆ. ಕೆಲವೊಮ್ಮೆ ತಮ್ಮ ತಪ್ಪುಗಳನ್ನು ಮುಚ್ಚಿಹಾಕಿಕೊಳ್ಳಲು ಇತರರ ತಪ್ಪುಗಳನ್ನು ಕಪಟಪೂರ್ವಕವಾಗಿ ಎತ್ತಿಹಿಡಿದು ಈ ವಿಷಯದಲ್ಲಿ ತಮ್ಮನ್ನು ಉತ್ತಮರು ಎಂಬ ಅಭಿಪ್ರಾಯವನ್ನು ಮೂಡಿಸಲು ಯತ್ನಿಸುತ್ತದೆ. ಇದು ಪುರಾತನವಾದ ಪತನಗೊಂಡ ಸ್ವಭಾವದ ಕೀಳಾದ ಮತ್ತು ಹೇಯವಾದ ಪ್ರವೃತ್ತಿಯಾಗಿದೆ. ಪ್ರೀತಿಯ ಪವಿತ್ರಾತ್ಮವಾದ ಕರ್ತನ ಆತ್ಮನಿಂದ ಪಡಕೊಂಡ ನೂತನ ಮನಸ್ಸು ಸ್ವಾರ್ಥತೆಯಿಂದೊಡಗೂಡಿದ ಈ ಪುರಾತನ ಮನಸ್ಸಿನೊಂದಿಗೆ ದೇವರವಾಕ್ಯದ ಮಾರ್ಗದರ್ಶನದಲ್ಲಿ ಪ್ರೀತಿಯ ನಿಯಮವಾದ ಸ್ವರ್ಣನಿಯಮದಡಿಯಲ್ಲಿ ಪ್ರಾರಂಭದಿಂದಲೂ ತಿಕ್ಕಾಟಕ್ಕೊಳಗಾಗುತ್ತದೆ ಮತ್ತು ಕೃಪೆ ಮತ್ತು ಜ್ಞಾನದಲ್ಲಿ ಹೆಚ್ಚು ಹೆಚ್ಚಾಗಿ ಬೆಳೆಯುತ್ತಾ ಹೋಗುತ್ತದೆ. ಮೊದಲಿಗೆ ಎಲ್ಲಾ ನೂತನ ಸೃಷ್ಟಿಯೂ 'ಕ್ರಿಸ್ತನಲ್ಲಿ ಕಂದ' ಗಳಾಗಿದ್ದಾರೆ ಮತ್ತು ನೂತನ ನಿಯಮವನ್ನು ಅಸ್ಪಷ್ಟವಾದ ರೀತಿಯಲ್ಲಿ ಅಂಗೀಕರಿಸಿದವರಾಗಿರುತ್ತಾರೆ. ಆದರೆ ಇದರಲ್ಲಿ ವೃದ್ಧಿಗೊಳ್ಳದೆ, ಪ್ರೀತಿಯ ನಿಯಮವನ್ನು ಮೆಚ್ಚದೇ ಹೋದಲ್ಲಿ ಮಹಾ ಬಹುಮಾನವನ್ನು ಗೆದ್ದುಕೊಳ್ಳಲು ಸಾಧ್ಯವಿಲ್ಲ.

ಪ್ರೀತಿಯ ನಿಯಮವು ಹೇಳುವುದೇನೆಂದರೆ –" ಸಹೋದರರ ಅಥವಾ ಇತರರ ತಪ್ಪುಗಳನ್ನು, ನ್ಯೂನ್ಯತೆಗಳನ್ನು ಲೋಕದ ಮುಂದೆ ಬಹಿರಂಗಪಡಿಸುವುದು ನಾಚಿಕೆಗೇಡು – ಕನಿಕರ ಅಥವಾ ಸಹಾನುಭೂತಿಯ ಒಂದು ಮಾತಾದರೂ ಅವರ ರಕ್ಷಣೆಗಾಗಿ ಕೂಡಲೇ ಬಾರದಿರುವುದೂ, ತಡವಾಗಿಯಾದರೂ ಔದರ್ಯದ ಆವರಣ ಅವುಗಳನ್ನು ಹರಡದಿರುವಂತೆ ಸಂಪೂರ್ಣವಾಗಿ ಮುಚ್ಚಲು ಮುಂದಾಗದಿರುವುದು ನಾಚಿಕೆಗೇಡು ! ನಮ್ಮ ಕೀರ್ತಿವಂತ ಪ್ರೀತಿಯ ಒಡೆಯನಿಗೆ ಕೆಲವರು ಒಮ್ಮೆ ಪಾಪಿಯೊಬ್ಬಳನ್ನು ದಂಡಿಸುವಂತೆ ಹೇಳಿದಾಗ ಆತನು ***" ನಿಮ್ಮಲ್ಲಿ ಪಾಪವಿಲ್ಲದವನು ಯಾರೋ ಅವನೇ ಮೊದಲು ಆಕೆಯ ಮೇಲೆ ಕಲ್ಲು ಹಾಕಲಿ"*** (ಯೋಹಾನ ೮:೭) ಎಂದು ಹೇಳುತ್ತಾನೆ. ತನ್ನಲ್ಲಿ ಯಾವ ದೋಷವೂ ಇಲ್ಲದ ವ್ಯಕ್ತಿಯು ಕರ್ತನಿಂದ ಅಪ್ಪಣೆಯಿಲ್ಲದೇ ನ್ಯಾಯತೀರಿಸುವ ಅಂದರೆ ತಪ್ಪು ಮಾಡುವವರ ಮೇಲೆ ಹಗೆ ತೀರಿಸುವ ಮತ್ತು ಅವರನ್ನು ಬಹಿರಂಗ ಪಡಿಸುವ ಇತ್ಯಾದಿಯಾದ ಸ್ಥಾನವನ್ನು ಹೊಂದಲು ಸ್ವಲ್ಪಮಟ್ಟಿಗೆ ಕ್ಷಮಾರ್ಹನಾಗಿದ್ದಾನೆ ; ಆದರೆ ಪಾಪವನ್ನೇ ಅರಿಯದ ನಮ್ಮ ಒಡೆಯನು ತನ್ನ ಮನದಲ್ಲಿ ಬಹಳಷ್ಟು ಪ್ರೀತಿಯನ್ನು ತುಂಬಿಕೊಂಡವನಾಗಿಪಾಪಿಗಳನ್ನು ಶಿಕ್ಷಿಸುವ ಅಥವಾ ಬಹಿರಂಗ ಪಡಿಸುವ ಬದಲಾಗಿ ಅವುಗಳನ್ನು ಕ್ಷಮಿಸಲು, ಮನ್ನಿಸಲು ಮುಂದಾದನು. ಆದುದರಿಂದ ಆತತ ಆತ್ಮನಿಂದ ಪಡಕೊಂಡವರಾದ ಆತನ ಮಕ್ಕಳೆಲ್ಲರೂ ನಿಸ್ಸಂದೇಹವಾಗಿ ಹಾಗೆಯೇ ಮಾಡತಕ್ಕದ್ದು. ಅವರು ಆತನ ಸ್ವರೂಪದಲ್ಲಿ ಬೆಳೆದು ಬರುವ ಅನುಪಾತಕ್ಕನುಸಾರವಾಗಿ ಅವರು ಮುಯ್ಯಿಗಾಗಿ ಪ್ರಾರ್ಥಿಸುವುದರಲ್ಲಿ ಮತ್ತು ಮಹಾ ನ್ಯಾಯಧಿಪತಿಯಿಂದ ದಂಡಿಸಲ್ಪಡದ ಹೊರತು ಅವರು ತಮ್ಮ ನಾಲಿಗೆಗಳಿಂದ ಅಂಥಾಃ ಶಿಕ್ಷೆಯನ್ನು ನಿರ್ವಹಿಸುವಲ್ಲಿ ಕಡೆಯವರಾಗಿರಬೇಕು. ಆತನು ಈಗ ಅದಕ್ಕೆ ವ್ಯತಿರಿಕ್ತವಾಗಿ " ಸಮಯಕ್ಕೆ ಮೊದಲೇ ತೀರ್ಪುಮಾಡಬೇಡಿರಿ" ಎಂದು ಹೇಳುತ್ತಾ ***"ಪ್ರತೀಕಾರಮಾಡಿ ಮುಯ್ಯಿಗೆ ಮುಯ್ಯಿ ತೀರಿಸುವುದು ನನ್ನ ಕೆಲಸ"*** (ಧರ್ಮೋ ೩೨ : ೩೫) ಎಂದು ಘೋಷಿಸುತ್ತಾನೆ. ***"ಪ್ರೀತಿ ಬಹು ತಾಳ್ಮೆಯುಳ್ಳದ್ದು, ಪ್ರೀತಿ*** *(ತಪ್ಪುಮಾಡಿದವರಿಗೆ)* ***ದಯೆ ತೋರಿಸುವುದು. ಪ್ರೀತಿಯು ಹೊಟ್ಟೆಕಿಚ್ಚುಪಡುವುದಿಲ್ಲ"*** ಎನ್ನುವುದರ ಮೂಲಕ ಅಪೊಸ್ತಲನು ಪ್ರೀತಿಯ ಆತ್ಮನನ್ನು ಉತ್ತಮ ರೀತಿಯಲ್ಲಿ ವರ್ಣಿಸಿದ್ದಾನೆ. ಇತರರ ಜಯವು ಅವರ ಗೌರವದಿಂದ ಕಡಿಮೆಮಾಡುವುದಿಲ್ಲ ಅಥವಾ ಅದರಿಂದ ಹಿಂದಕ್ಕೆ ಸೆಳೆಯಲು ಬಯಸುವುದಿಲ್ಲ. ***"ಪ್ರೀತಿಯು ಹೊಗಳಿಕೊಳ್ಳುವುದಿಲ್ಲ ; ಉಬ್ಬಿಕೊಳ್ಳುವುದಿಲ್ಲ".*** ಆದಕಾರಣ ಸ್ವಯಂ ಪ್ರಕಾಶಕ್ಕಾಗಿ ತಾರತಮ್ಯಗೊಳ್ಳುವಂತೆ ಇತರರ ವೈಭವದಿಂದ ಕಡಿಮೆಯಾಗುವುದಿಲ್ಲ. ***"ಮರ್ಯಾದೆಗೆಟ್ಟು ನಡೆಯುವುದಿಲ್ಲ"***. ಮಿತಿಮೀರಿದ ಯಾವುದೇ ಅತಿರೇಕವಾದ ಸ್ವಯಂ ಅಪೇಕ್ಷೆ ಇದಕ್ಕಿಲ್ಲ ಮತ್ತು ಉತ್ಕಟವಾದ ಪದ್ದತಿಗಳನ್ನು ದೂರವಿರಿಸುತ್ತದೆ. ತನ್ನದಲ್ಲವನ್ನು

ಪ್ರೀತಿ ಎಂದಿಗೂ ಬಯಸುವುದಿಲ್ಲ. ಇತರರ ಗೌರವ, ಸಂಪತ್ತು ಅಥವಾ ಖ್ಯಾತಿ ಇವುಗಳಿಗಾಗಿ ದುರಾಸೆಪಡುವುದಿಲ್ಲ, ಆದರೆ ಇದಕ್ಕೆ ಬದಲಾಗಿ ಅವರುಗಳು ಆಶೀರ್ವಾದ ಹೊಂದಿರುವುದನ್ನು ಕಂಡು ಹರ್ಷಿಸುತ್ತದೆ ಮತ್ತು ಆ ಆಶಿರ್ವಾದಗಳನ್ನು ಕಡಿಮೆಗೊಳಿಸದೆ ಅವುಗಳನ್ನು ಹೆಚ್ಚಿಸಲು ಪ್ರಯತ್ನಿಸುತ್ತದೆ. ಪ್ರೀತಿಯನ್ನು ಸುಲಭವಾಗಿ ಕೆಣಕಲಾಗದು. ಸಮರ್ಪಿಸಿದರೂ ಕೇವಲ ಪರಿಹಾರ ದೊರೆಯುತ್ತದೆ : ಪತನದ ಸುಲುವಾದ ಸಮಗ್ರ ಜನಾಂಗದ ಪ್ರಸ್ತುತ ದುರವಸ್ಥೆಯನ್ನು ನೆನಪುಮಾಡಿಕೊಂಡು ಅದು ಕೋಪಗೊಳ್ಳದೆ ಅನುಕಂಪವುಳ್ಳದ್ದಾಗಿದೆ. ಪ್ರೀತಿ "ಕೆಟ್ಟದ್ದನ್ನು ಕುರಿತು ಆಲೋಚಿಸದು" ಅದು ಕೆಟ್ಟದ್ದನ್ನು ಶೋಧಿಸುವುದೂ ಇಲ್ಲ, ಕಲ್ಪಿಸುವುದೂ ಇಲ್ಲ. ಕುತರ್ಕ ವಾಗ್ವಾದವು ಅದಕ್ಕೆ ಪರಕೀಯವಾಗಿದ್ದು ಅನುಮಾನದ ಲಾಭವನ್ನು ನೀಡುವ ಒಲವುಳ್ಳದ್ದಾಗಿದೆ. (೧ ತಿಮೋ ೬:೪ ರೊಂದಿಗೆ ಹೋಲಿಸಿ)

ಪ್ರೀತಿ "***ಅನ್ಯಾಯವನ್ನು ನೋಡಿ ಸಂತೋಷಪಡದೆ ಸತ್ಯಕ್ಕೆ*** *(ನ್ಯಾಯಕ್ಕೆ)* ***ಜಯವಾಗುವಲ್ಲಿ ಸಂತೋಷಪಡುತ್ತದೆ".*** ಈ ಕಾರಣದಿಂದ ಕೀರ್ತಿವಂತವಾದ ಮಾತುಗಳನ್ನು ಹಾಗೂ ಕಾರ್ಯಗಳನ್ನು ಮರೆಮಾಡದೆ ಅವುಗಳು ಎಲ್ಲರಿಗೂ ತಿಳಿಯುವಂತೆ ಮಾಡುತ್ತದೆ. ಆದರೆ ಅಪಕೀರ್ತಿಯುತ ಮಾತುಗಳು ಮತ್ತು ಕಾರ್ಯಗಳನ್ನು ಬಹಿರಂಗಪಡಿಸಲು ಇಷ್ಟಪಡದೆ ಅವುಗಳನ್ನು ದೂರವಿರಿಸುತ್ತದೆ. ಯಾವುದಾಗಲೀ, ಪೂರ್ಣವಾದ ಪರೀಕ್ಷೆಯನ್ನು ಎದುರಿಸಲು ಯಾರಾಗಲೀ ಸಮರ್ಪಕರಲ್ಲ ಎಂಬ ಅನುಕಂಪದ ಆವರಣದಲ್ಲಿ ಅದು ಎಲ್ಲವನ್ನೂ ಮುಚ್ಚಿಹಾಕುತ್ತದೆ. ಪ್ರೀತಿಯು ತನ್ನ ಔದರ್ಯದ ಆವರಣವನ್ನು ಸದಾ ಪೂರ್ವಭಾವಿ ನಿರೀಕ್ಷಣೆಯಿಂದ ಸಿದ್ಧವಾಗಿಟ್ಟುಕೊಂಡಿರುತ್ತದೆ. ***"ಪ್ರೀತಿಯು ಎಲ್ಲವನ್ನೂ ನಂಬುತ್ತದೆ.*** ಒಳ್ಳೇ ಉದ್ದೇಶಗಳುಳ್ಳ ಕೇಳಿಕೆಗಳ ಬಗ್ಗೆ ಯಾವುದೇ ವಾಜ್ಯದ ಒಲವು ತೋರುವುದಿಲ್ಲ, ಬದಲಾಗಿ ಅವುಗಳನ್ನು ಒಪ್ಪಿಕೊಳ್ಳುತ್ತದೆ. ಪ್ರೀತಿಯು ***" ಎಲ್ಲವನ್ನೂ ನಿರೀಕ್ಷಿಸುತ್ತದೆ."*** ಸಾಧ್ಯವಾದ ಮಟ್ಟಿಗೆ ಪೂರ್ಣವಾದ ನೀತಿಭ್ರಷ್ಟತೆಯ ಅಲೋಚನೆಗಳನ್ನು ಪ್ರತಿಭಟಿಸುತ್ತದೆ. ಪ್ರೀತಿ ***"ಎಲ್ಲವನ್ನೂ ಸಹಿಸಿಕೊಳ್ಳುತ್ತದೆ"*** ನಿಜವಾಗಿ ಪಶ್ಚಾತ್ತಾಪಪಟ್ಟವರನ್ನು ತಿರಸ್ಕರಿಸಿದ ಯಾವುದೇ ಮಿತಿಯನ್ನು ನೆಲೆಗೊಳಿಸಲಾಗದು. " ***ಪ್ರೀತಿಯು ಎಂದಿಗೂ ಬಿದ್ದುಹೋಗುವುದಿಲ್ಲ"*** ಇತರ ಕೃಪೆ ಮತ್ತು ಬಹುಮಾನಗಳು ಅದರ ಉದ್ದೇಶವನ್ನು ನೆರವೇರಿಸಿ ಇಲ್ಲವಾಗಬಹುದು ಆದರೆ ಪ್ರೀತಿಯು ಅತ್ಯಗತ್ಯವಾಗಿದ್ದು ಒಮ್ಮೆ ಅದನ್ನು ಪಡಕೊಂಡಮೇಲೆ ನಿತ್ಯಕಾಲಕ್ಕೂ ಅದು ನಮ್ಮದಾಗಿಬಿಡುತ್ತದೆ. ಪ್ರೀತಿಯು ಪ್ರಧಾನವಾದುದು (೧ ಕೊರಿ ೧೩:೪-೧೩ರ ವರೆಗೆ ನೋಡಿರಿ).

ಆದರೆ, ಪೂರಕವಲ್ಲದ ಸತ್ಯವನ್ನು ಹೇಳುವುದು ಪ್ರೀತಿ ಮತ್ತು ಸುವರ್ಣ ನಿಯಮವನ್ನು ಉಲ್ಲಂಘಿಸುವುದಾಗಿದೆ. ಇದು ಇನ್ನೂ ಹೆಚ್ಚಿನ ಅಪ್ರಖ್ಯಾತವದುದೆಂದು, ಇನ್ನೂ ಹೆಚ್ಚು ಅಪ್ರೀಯವಾದುದೆಂದು, ಮತ್ತು ಅಪರಾಧಿ ಅಭ್ಯಾಸವಾಗಿದೆ. ಇತರರ ಬಗ್ಗೆ ಸತ್ಯವೆಂದು ಸಕಾರಾತ್ಮಕವಾಗದ ಅಪ್ರಖ್ಯಾತವಾದ ಸಂಗತಿಗಳನ್ನು ಹರಡುವುದು ಪ್ರಾಪಂಚಿಕ ಮತ್ತು ಹೆಸರಿನ ಮಾತ್ರದ ಕ್ರೈಸ್ತರಲ್ಲಿ ಮಾತ್ರವಲ್ಲ ನಿಜವಾದ ಕ್ರೈಸ್ತರಲ್ಲಿಯೂ ಸರ್ವಸಾಮಾನ್ಯವಾಗಿದೆಯೆಂದು ನಾವು ಹೇಳುತ್ತೇವೆ. ಕರ್ತನ ಜನರಲ್ಲಿ ಯಾರಾದರೂ " ಯಾರ ಬಗ್ಗೆಯೂ ಕೆಟ್ಟದ್ದನ್ನು ನುಡಿಯಬೇಡ" ಎಂಬ ದೇವರ ಸೂಚನೆಗಳನ್ನು ಕಡೆಗೆಣಿಸುವುದಾದರೆ ಅದು ಎಷ್ಟೋ ನಾಚಿಕೆಗೇಡು! ನಾಚಿಕೆಗೇಡು! ಕೇವಲ ಪ್ರೀತಿಯ ನಿಯಮದಲ್ಲಿ ಇನ್ನೂ ಶಿಶುಗಳಂತಿರುವವರು, ಅನುಭವವಿಲ್ಲದವರು ಮಾತ್ರವೇ ಇಬ್ಬರು, ಮೂವರು ಸಾಕ್ಷಿಗಳ ಬಾಯಿಯಿಂದ ಯಾವ ಸಂದೇಹಾಸ್ಪವಿಲ್ಲದ ಪುರಾವೆಗಳಿಲ್ಲದೆ ಕೇಳಿದ ನಂತರ ಮನಸ್ಸಿಲ್ಲದಿದ್ದರೂ ಸಹೋದರನ ಅಥವಾ ನೆರೆಯವನ ಕೆಟ್ಟತನವನ್ನು ನಂಬಬೇಕಾಗುವುದು ಮತ್ತು ಆತನನ್ನು ಅನುಮಾನಾಸ್ಪದವಾದ ಕೇಳಿಕೆಮಾತುಗಳ ಮೇಲೆ ನಿಂದಿಸಬೇಕಾಗಬಹುದು ಎಂಬ ಇದರ ಸಂದೇಶವನ್ನು ತಪ್ಪಾಗಿ ಅರ್ಥಮಾಡಿಕೊಳ್ಳುತ್ತಾರೆ.

## ನಮ್ಮನ್ನು ನಾವೇ ತೀರ್ಪುಮಾಡಿಕೊಳ್ಳಬೇಕು

“ನಮ್ಮನ್ನು ನಾವೇ ವಿಚಾರಿಕೊಂಡರೆ ನ್ಯಾಯವಿಚಾರಣೆಗೆ (ದೇವರ ಶಿಕ್ಷೆ ಮತ್ತು ಸರಿಪಡಿಸುವಿಕೆಗೆ) ಒಳಗಾಗುವುದಿಲ್ಲ” (೧ ಕೊರಿ ೧೧ :೩೧)

ಇತರರ ಮತ್ತು ಅವರ ವಿಷಯಗಳ ಬಗ್ಗೆ ಗೊಡ್ಡು ಹರಟೆ ಮಾತನಾಡುವ ಪ್ರವೃತ್ತಿಯನ್ನು ಈ ಸುವರ್ಣ ನಿಯಮವು ನಿಶ್ಚಯವಾಗಿ ಕೊನೆಗೊಳಿಸುತ್ತದೆ ಸುಳ್ಳು ನಿಂದನೆ ಮಾಡುವವರು ತಾವು ಅಂಥಾಃ ನಿಂದನೆಗೆ ಬೀಳಲು ಬಯಸುತ್ತಾರೋ? ಗೊಡ್ಡು ಹರಟೆಮಾಡುವವರು ತಮ್ಮ ವಿಷಯಗಳ ಬಗ್ಗೆ, ಕಷ್ಟ ಹಾಗೂ ಬಲಹೀನತೆಗಳ ಬಗ್ಗೆ ಸಾರ್ವಜನಿಕವಾಗಿಯಾಗಲೀ, ಗುಪ್ತವಾಗಿಯಾಗಲೀ ಯಾರಾದರೂ ಚರ್ಚಿಸುವುದನ್ನು ಬಯಸುತ್ತಾರೋ? ಈ ಲೋಕದವರಿಗೆ ಗೊಡ್ಡುಹರಟೆ ಮತ್ತು ಹಗರಣಗಳ ಬಗ್ಗೆ ಬಿಟ್ಟು ಮಾತನಾಡಲು ಬೇರೆ ವಿಷಯಗಳೇ ಇಲ್ಲ ! ಆದರೆ ದೇವದೂತರುಗಳು ಹಾಡಿದ ***“ಮೇಲಣ ಲೋಕಗಳಲ್ಲಿ ದೇವರಿಗೆ ಮಹಿಮೆ, ಭೂಲೋಕದಲ್ಲಿ ಮನುಷ್ಯರೊಳಗೆ ಸಮಾಧಾನ ದೇವರು ಅವರಿಗೆ ಒಲಿಯುತ್ತಾನೆ”*** (ಲೂಕ ೨:೧೪) ಎಂಬ ಹಾಡಿನ ವಸ್ತುವಿಷಯದಲ್ಲಿರುವ ದೇವರ ಯೋಜನೆ ಮತ್ತು ಪ್ರೀತಿ ಇವುಗಳು ಅವರಿಗೆ ಒದಗುವವರೆಗೂ ನೂತನಸೃಷ್ಟಿಗಳು ಮೂಕರಾಗಿರುವುದನ್ನು ಆಯ್ದುಕೊಳ್ಳಬೇಕು. ನಂತರ ಅವರ ಬಾಯಿಮಾತುಗಳೂ ಹೃದಯದ ಆಲೋಚನೆಗಳು ದೇವರಿಗೆ ಒಪ್ಪಿಗೆಯಾಗುತ್ತವೆ ಮತ್ತು ಅವರನ್ನು ಸಂಪರ್ಕಿಸುವವರಿಗೆ ಆಶೀರ್ವಾದವನ್ನುಂಟುಮಾಡುತ್ತವೆ.

ನಾಲಿಗೆಯ ಬಗ್ಗೆ ವ್ಯಾಖ್ಯಾನಿಸುವ ಅಪೋಸ್ತಲನು ನಮ್ಮ ದೇಹದಲ್ಲಿಟ್ಟಿರುವ ಈ ಚಿಕ್ಕ ಅಂಗಕ್ಕೆ ಬಹಳಷ್ಟು ಪ್ರಭಾವವಿದೆ ಎಂಬುದನ್ನು ತೋರಿಸುತ್ತಾನೆ. ಅದು ಎಂದಿಗೂ ಸಾಯದ ಮಾತುಗಳನ್ನು ಹರಡಬಹುದು, ಆದರೆ ಮೇಲಿಂದ ಮೇಲೆ ಜೀವಿಸುವವರನ್ನೂ ಮತ್ತು ಇನ್ನೂ ಜನಿಸದಿರುವವರನ್ನೂ ಸಹಾ ಆಶೀರ್ವದಿಸುತ್ತಾ ಹೋಗುತ್ತದೆ. ಅಥವಾ “ ಮರಣಕರವಾದ ವಿಷ” ತುಂಬಿಕೊಂಡು ಅದು ಯಾರದಾದರೂ ಜೀವನವನ್ನು ಕಹಿಮಾಡುವ ವಿಷ ಬೀಜಗಳನ್ನು ಹರಡಬಹುದು ಮತ್ತು ಇತರರ ಜೀವನವನ್ನು ನಾಶಪಡಿಸಬಹುದು ಇಲ್ಲವೇ ಹೊಸಕಿಹಾಕಬಹುದು. ***“ನಾಲಿಗೆಯಿಂದ ತಂದೆಯಾದ ಕರ್ತನನ್ನು ಕೊಂಡಾಡುತ್ತೇವೆ ; ಅದರಿಂದಲೇ ದೇವರ ಹೋಲಿಕೆಗೆ ಸರಿಯಾಗಿ ಉಂಟುಮಾಡಲ್ಪಟ್ಟ ಮನುಷ್ಯರನ್ನು ಶಪಿಸುತ್ತೇವೆ. ಅದೇ ಬಾಯಿಯಿಂದ ಸ್ತುತಿ ಶಾಪ ಎರಡೂ ಹೊರಬರುತ್ತವೆ, ನನ್ನ ಸಹೋದರರೇ ಹೀಗಿರುವುದು ಯೋಗ್ಯವಲ್ಲ. ಊಟೆಯ ಒಂದೇ ಬಾಯಿಂದ ಸಿಹಿ ನೀರು ಕಹಿ ನೀರು ಎರಡೂ ಹೊರಾಡುವುದುಂಟೋ?”*** (ಯಾಕೋಬ ೩:೯–೧೧) ಎಂದು ಅಪೋಸ್ತಲನು ಹೇಳಿದ್ದಾನೆ.

***“ಹೃದಯದಲ್ಲಿ ತುಂಬಿರುವುದೇ ಬಾಯಲ್ಲಿ ಹೊರಡುವುದು ”*** (ಮತ್ತಾಯ ೧೨:೩೪) ಆದುದರಿಂದ ಇತರರ ಬಗ್ಗೆ ನಾವು ಗೊಡ್ಡು ಹರಟೆಹೊಡೆಯುವಾಗ, ಅವರ ಸಂಗತಿಗಳಲ್ಲಿ ಅತೀವವಾಗಿ ಕೈಹಾಕುವ ಕೆಲಸದಲ್ಲಿ ತೊಡಗಿರುವಾಗ ನಮ್ಮ ಹೃದಯದ ವಿಶಾಲವಾದ ಒಂದು ಮೂಲೆಯು ದೇವರ ಕೃಪೆ ಮತ್ತು ಪ್ರೀತಿಯ ಬಗ್ಗೆ ಬರಿದಾಗಿದೆ ಎಂದು ತೋರಿಬರುತ್ತದೆ. ಈ ಆಲೋಚನೆಯು ನಮ್ಮನ್ನು ತಕ್ಷಣ ದೇವರ ಕೃಪಾಸಾನಕ್ಕೆ ಮತ್ತು ದೇವರು ಅದಕ್ಕಾಗಿ ಹಸಿದ ಮತ್ತು ಬಾಯಾರಿದವರಿಗೆ ವಾಗ್ದಾನಮಾಡಿರುವ ಆತ್ಮನ ತುಂಬಿಸುವಿಕೆಯ ವಾಕ್ಯದ ಬಳಿ ಕೊಂಡೊಯ್ಯಬೇಕು. ಗೊಡ್ಡು ಹರಟೆ ಮತ್ತು ಇತರರ ಕೆಲಸದಲ್ಲಿ ಕೈಹಾಕುವುದಕ್ಕಿಂತಲೂ ಇನ್ನೂ ಹೆಚ್ಚಾದ ಕೆಟ್ಟ ಸಂಗತಿಯೆಂದರೆ, ನಾವು ಇತರರ ಬಗ್ಗೆ ಕೆಟ್ಟದ್ದನ್ನು ಕೇಳುವುದರಲ್ಲಿ ಹಾಗೂ ಮಾತನಾಡುವುದರಲ್ಲಿ ಆನಂದಪಡುವಾಗ ನಮ್ಮ ಹೃದಯದ ಪರಿಸ್ಥಿತಿ ಇನ್ನೂ ಹದಗೆಟ್ಟಿರುತ್ತದೆ : ಅಲ್ಲಿ ಹೊಟ್ಟೇಕಿಚ್ಚು , ಹಗೆತನ , ಮತ್ಸರ ಮುಂತಾದ ಅನೇಕ ದ್ವೇಷವು ತುಂಬಿ ಹೊರಸೂಸುತ್ತದೆ. ಈ ಸಂಗತಿಗಳು ಶರೀರಭಾವದವುಗಳು ಮತ್ತು ಸೈತಾನನವು ಎಂದು ಅಪೋಸ್ತಲನು ಹೇಳುತ್ತಾನೆ ( ಗಲಾತ್ಯ ೫:೧೯–೨೧ ನೋಡಿರಿ) . ಈ ವಿಷಯದಲ್ಲಿ ನಾವು ನೂತನ ಸೃಷ್ಟಿಗಳಿಗೆ –

“ನೀವು ಈ ರೀತಿ ಮಾಡಿದಲ್ಲಿ ಖಂಡಿತವಾಗಿಯೂ ನಿಮಗೆ ನಮ್ಮ ಕರ್ತನಾದ ಯೇಸು ಕ್ರಿಸ್ತನ ನಿತ್ಯಜೀವದ ರಾಜ್ಯದಲ್ಲಿ ಪ್ರವೇಶ ದೊರೆಯಲಾರದು ಎಂದು ದಿಗ್ಭ್ರಮೆಗೊಳಿಸುತ್ತೇವೆ ಮತ್ತು ಕೂಲಂಕುಷವಾಗಿ ಎಚ್ಚರಿಸುತ್ತೇವೆ.

ಈ ರಾಜ್ಯಕ್ಕೆ ಅರ್ಹರಾಗುವುದು ನಮ್ಮನ್ನು ವಿರುದ್ಧ ದಿಕ್ಕಿಗೆ ಕೊಂಡೊಯ್ಯುತ್ತದೆ. ಅಪೋಸ್ತಲನಾದ ಪೇತ್ರನು ಹೇಳುವಂತೆ ***“ನಿಮಗಿರುವ ನಂಬಿಕೆಗೆ ಸದ್ಗುಣವನ್ನೂ, ಸದ್ಗುಣಕ್ಕೆ ಜ್ಞಾನವನ್ನೂ, ಜ್ಞಾನಕ್ಕೆ ದಮೆಯನ್ನೂ, ದಮೆಗೆ ತಾಳ್ಮೆಯನ್ನೂ, ತಾಳ್ಮೆಗೆ ಭಕ್ತಿಯನ್ನೂ, ಭಕ್ತಿಗೆ ಸಹೋದರ ಸ್ನೇಹವನ್ನೂ, ಸಹೋದರ ಸ್ನೇಹಕ್ಕೆ ಪ್ರೀತಿಯನ್ನೂ ಕೂಡಿಸಿರಿ . . . . ಹೀಗೆ ನೀವು ಮಾಡಿದರೆ ಎಂದಿಗೂ ಎಡಹುವುದಿಲ್ಲ”*** (೨ ಪೇತ್ರ ೫-೧೦ ನೋಡಿರಿ) . ಅಪೋಸ್ತಲನಾದ ತೋಮನು ಈ ಪ್ರಸ್ತಾಪದ ಬಗ್ಗೆ ಬಹು ಸ್ಪಷ್ಟವಾಗಿ***“ತೀಕ್ಷ್ಣವಾದ ಮತ್ಸರವೂ ಪಕ್ಷಬೇದವು ನಿಮ್ಮ ಹೃದಯದೊಳಗೆ ಇರುವಲ್ಲಿ ನೀವು ಸತ್ಯಕ್ಕೆ ವಿರೋಧವಾಗಿ ಸುಳ್ಳಾಡಿ ಹೊಗಳಿಕೊಳ್ಳಬೇಡಿರಿ. ಅದು ಮೇಲಿನಿಂದ ಬಂದ ಜ್ಞಾನವಲ್ಲ ; ಅದು ಭೂಸಂಬಂಧವಾದುದು, ಪ್ರಾಕೃತಭಾವವಾದದ್ದು, ದೆವ್ವಗಳಿಗೆ ಸಂಬಂಧಪಟ್ಟದ್ದು”*** (ಯಾಕೋಬ ೩:೧೪-೧೫) ಎಂದಿದ್ದಾನೆ. ಇಂಥಾಃ ನಿಂದಾತ್ಮಕವಾದ ಮತ್ತು ಕಹಿಯಾದ ಆತ್ಮವುಳ್ಳವರಿಗೆ ಅದರ ವ್ಯತಿರಿಕ್ತವಾದ ಕ್ರಿಸ್ತನ ಆತ್ಮನನ್ನು ನೀಡಲಾಗುವುದು. ಇದು ಪವಿತ್ರಾತ್ಮ, ಪ್ರೀತಿಯ ಆತ್ಮ ; ಆತನು ತನಗಾಗಿಯಾಗಲೀ ಅಥವಾ ಇತರರಿಗಾಗಲೀ ಸುಳ್ಳಾಡದಿರಲಿ – ಆತನು ಆತನ ಲಜ್ಜೆಯಲ್ಲಿ ಮಹಿಮೆಗೊಳ್ಳದಿರಲಿ – ಈರೀತಿಯಲ್ಲಿ ಆತನು ಬೆಳಕಿಗೆ ಬದಲಾಗಿ ಕತ್ತಲೆಯನ್ನು ನೀಡದಿರಲಿ, ಅಭಿಷಿಕ್ತನ ಆತ್ಮನ ಬದಲಾಗಿ ಸೈತಾನನ ಆತ್ಮನನ್ನು ಹೊಂದದಿರಲಿ.

ಮುಂದುವರೆಯುತ್ತಾ ಆಪೋಸ್ತಲನು ಎಲ್ಲಾ ಸಮಯಗಳಲ್ಲಿ ಕರ್ತನ ಜನರನ್ನು ತೊಂದರೆ ಪಡಿಸಿದ ಗೊಂದಲ ಮತ್ತು ಅವಿಶ್ರಾಂತಿಯ ರಹಸ್ಯವನ್ನು ಬಿಚ್ಚಿಡುತ್ತಾನೆ. ಇದರಲ್ಲಿಯೇ ಇರುವುದು ಆಶುದ್ಧಕರ, ಹೃದಯದ ಕೇವಲ ಅಪೂರ್ಣವಾದ ಪವಿತ್ರತೆಯ ಪರಿಸ್ಥಿತಿಯಾಗಿದೆ ಎಂಬುದನ್ನು–***“ಮತ್ಸರವೂ ಪಕ್ಷಬೇಧವೂ ಇರುವ ಕಡೆ ಗಲಿಬಿಲಿಯೂ ಸಕಲವಿಧ ನೀಚಕೃತ್ಯಗಳೂ ಇರುವುವು”*** (ಯಾಕೋಬ ೩:೧೬) ಎಂಬ ಮುಂದಿನ ಮಾತುಗಳಲ್ಲಿ ಹೇಳುತ್ತಾನೆ. ಪತನಗೊಂಡ ಈ ಹಳೇ ಸ್ವಭಾವದ ಕಳೆಯನ್ನು ಬೆಳೆಯಗೊಟ್ಟರೆ ಅವುಗಳು ಹಾನಿಕಾರಕವಾಗಿರುವುದಲ್ಲದೆ ಕ್ರಮೇಣವಾಗಿ ಗುಂಪುಕೂಡಿ ಎಲ್ಲಾ ಸುಂದರ ಹೂಗಳನ್ನು ಅಂದರೆ ಆತ್ಮನ ಕೃಪೆಯನ್ನು ಕೊಂದುಹಾಕುತ್ತವೆ.

## ನಮ್ಮನ್ನು ಸರಿಯಾಗಿ ತೀರ್ಪುಮಾಡಿಕೊಳ್ಳುವುದು

ಅಪೋಸ್ತಲನಾದ ಪೌಲನು ನೂತನ ಸೃಷ್ಟಿಗಳಾದ ನಮ್ಮ ಬೆಳವಣಿಗೆಯ ಬಗ್ಗೆ, ನಮ್ಮ ಸಮರ್ಪಕವಾದ ತೀರ್ಪು ಅಥವಾ ಟೀಕೆಗಳ ಬಗ್ಗೆ ಉದ್ದೇಶಿಸಿ ***“ಪ್ರೀಯರೇ, ಈ ವಾಗ್ದಾನಗಳು ನಮಗಿರುವುದರಿಂದ ನಾವು ಶರೀರಾತ್ಮಗಳ ಕಲ್ಮಶವನ್ನು ತೊಲಗಿಸಿ ನಮ್ಮನ್ನು ಶುಚಿಮಾಡಿಕೊಂಡು ದೇವರ ಭಯದಿಂದ ಕೂಡಿದವರಾಗಿ ಪವಿತ್ರತ್ವವನ್ನು ಸಿದ್ಧಿಗೆ ತರುವುದಕ್ಕೆ ಪ್ರಯತ್ನಿಸೋಣ ”*** ( ೨ ಕೊರಿ ೭:೧) ಎಂದು ಹೇಳುತ್ತಾನೆ. “ಪ್ರತಿ ಮನುಷ್ಯನೂ ತನ್ನನ್ನು ಪರೀಕ್ಷಿಸಿಕೊಳ್ಳಲಿ” – ಆತನು ತನ್ನಲ್ಲಿನ ಬಲಹೀನತೆಗಳನ್ನೂ, ಆಶುದ್ಧವಾದ ದೈಹಿಕ ಸ್ವಭಾವಗಳನ್ನು ತಿಳಿದುಕೊಂಡು ಪುರಾತನ ವ್ಯಕ್ತಿಯ ಕ್ರೀಯೆಗಳನ್ನೆಲ್ಲಾ ತೆಗೆದುಹಾಕಿ ತನ್ನನ್ನು ನವೀಕರಿಸಿಕೊಳ್ಳಲಿ, ಮಹಿಮೆಯಿಂದ ಮಹಿಮೆಗೆ ಬದಲಾಗಲಿ, ದೇವರ ಪ್ರೀತಿಯ ಕುಮಾರನ ಸ್ವರೂಪಕ್ಕೆ ಹೆಚ್ಚು ಹೆಚ್ಚು ಸಮೀಪವಾಗಲಿ. ಆತನು ನಮ್ಮ ಮಾದರಿಯೂ, ವಿಮೋಚಕನೂ, ಕರ್ತನೂ ಆಗಿದ್ದಾನೆ. ಆದರೆ ಅಪೋಸ್ತಲನಾದ ಪೌಲನು ನಾವು ಸಾಧ್ಯವಾದಷ್ಟು ನಮ್ಮ ದೇಹವನ್ನು ಶುದ್ಧೀಕರಿಸಿಕೊಳ್ಳುವುದು ಮಾತ್ರವಲ್ಲ ನಮ್ಮ ಆತ್ಮಗಳನ್ನು ಸಹಾ ಶುದ್ಧಿಕರಿಸಿಕೊಂಡು ನೂತನ ಮನಸ್ಸನ್ನು ಹೊಂದಿದವರಾಗಿ ಪವಿತ್ರವಾದ ನಿರ್ಣಯಗಳಿಗೆ, ಸಂಕಲ್ಪಗಳಿಗೆ ಪೂರ್ಣ ನಿಯಂತ್ರಣವನ್ನು ನೀಡೋಣ ಮತ್ತು ನಮ್ಮ ಅಲೋಚನೆಗಳೂ ಕ್ರಿಸ್ತನಲ್ಲಿ ವ್ಯಕ್ತಗೊಂಡ, ನಿದರ್ಶನಗೊಂಡ ದೇವರ ನಿರ್ಬಂಧಕ್ಕೆ ಒಳಪಡಿಸೋಣ ಎಂದೆನ್ನುತ್ತಾನೆ.

ನಾವು ನಮ್ಮ ದೇಹವನ್ನು ಶುದ್ಧೀಕರಿಸಿಕೊಂಡು, ನಾಲಿಗೆಗೆ ಕಡಿವಾಣ ಹಾಕಿದರೂ ನಮ್ಮ ಆಲೋಚನೆಗಳು ಉದ್ಭವಿಸುವ ನಮ್ಮ ಹೃದಯ, ಮನಸ್ಸು ಮತ್ತು ಆತ್ಮವನ್ನು ನಿರ್ಲಕ್ಷಿಸಿದರೆ ಅದು ವ್ಯರ್ಥ್ಯ. ಯಾಕೆಂದರೆ ಆ ಆಲೋಚನೆಗಳು ನಮ್ಮ ದೇಹದಲ್ಲಿ ಮಾತುಗಳ ಮತ್ತು ಕ್ರೀಯೆಗಳ ಮೂಲಕ ಪ್ರಕಟಗೊಳ್ಳುತ್ತವೆ. ಪ್ರಾರ್ಥನೆ ಮತ್ತು ದೃಢ ಪ್ರಯತ್ನದಿಂದ ಮಾತ್ರವೇ ದೇವರ ರಾಜ್ಯದಲ್ಲಿ ಪಾಲುದಾರರಾಗಲು ಅಗತ್ಯವಿರುವ ಈ ಶುದ್ಧೀಕರಣ ಕಾರ್ಯವು ನೆರವೇರುತ್ತದೆ – ಶರೀರದ ಪೂರ್ಣವಾದ ಶುದ್ಧೀಕರಣವನ್ನು ನೆರವೇರಿಸುವುದನ್ನು ನಾವು ನಿರೀಕ್ಷಿಸುವುದಲ್ಲ, "ದೇವರ ಭಯಭಕ್ತಿಯಲ್ಲಿ ಪವಿತ್ರತೆಯನ್ನು ಸಿದ್ದಿಗೆತರುವುದು". ಇದು ದೇವರು ನಮ್ಮಿಂದ ಆಗ್ರಹಪಡಿಸುವಂತೆ ನಮ್ಮ ಮನಸ್ಸು, ಹೃದಯ ಮತ್ತು ಚಿತ್ತವನ್ನು ಸಂಪೂರ್ಣವಾಗಿ ಶುದ್ಧೀಕರಿಸುವುದಾಗಿದೆ. ಆತನು ಇದರಲ್ಲಿ ನಮ್ಮ ಹೃದಯವು ಪವಿತ್ರಗೊಳ್ಳುವುದನ್ನು, ಆತನಿಗೆ, ಆತನ ಆತ್ಮಕ್ಕೆ, ಪ್ರೀತಿಯ ನಿಯಮಕ್ಕೆ ನಿಷ್ಟೆಯಾಗಿರುವುದನ್ನು ಆತನು ನೋಡುತ್ತಾನೆ. ಸೂಕ್ತಸಮಯದಲ್ಲಿ ಅದಕ್ಕೊಪ್ಪುವ ಶರೀರವನ್ನು ಆತನು ದಯಪಾಲಿಸುವನು, " ***ನಿರ್ಮಲಚಿತ್ತರು ಧನ್ಯರು, ಅವರು ದೇವರನ್ನು ನೋಡುವರು*** " (ಮತ್ತಾಯ ೫:೮),

**"ದೇವರ ಪ್ರೀತಿಯಲ್ಲಿಯೂ ಕ್ರಿಸ್ತನ ತಾಳ್ಮೆಯಲ್ಲಿಯೂ ಸೇರುವಂತೆ ಕರ್ತನೇ ನಿಮ್ಮನ್ನು ನಡಿಸಲಿ"** (೨ ಥೆಸ ೩:೫) ಎಂಬ ಮಾತುಗಳು ಇಲ್ಲಿ ಎಷ್ಟೋ ಸಮರ್ಪಕವಾದವುಗಳಾಗಿವೆ. ಪ್ರೀತಿಯು ಸಭ್ಯವಾದುದು, ಸಾಧುವಾದುದು, ತಾಳ್ಮೆಯುಳ್ಳದ್ದು, ದೀರ್ಘ ಸಹನೆಯುಳ್ಳದ್ದು, ಸ್ವಹಿತವನ್ನು ಕುರಿತು ಚಿಂತಿಸುವುದಿಲ್ಲ, ಉಬ್ಬಿಕೊಳ್ಳುವುದಿಲ್ಲ, ಹೊಟ್ಟೆಕಿಚ್ಚುಪಡುವುದಿಲ್ಲ ಆದರೆ ನಂಬಿಕೆಯುಳ್ಳದ್ದು ಮತ್ತು ಸ್ವರ್ಣನಿಯಮಕ್ಕನುಸಾರವಾಗಿ ವಿಚಾರಯೊಗ್ಯವಾದುದು. ನಾವು ನಮ್ಮ ಹೃದಯಗಳನ್ನು ಇಂಥಾಃ ಪ್ರೀತಿಯ ಕಡೆಗೆ ನಿರ್ದೇಶಿಸತಕ್ಕದ್ದು — ಯಾಕೆಂದರೆ, ಒರ್ವ ನೂತನ ಸೃಷ್ಟಿಯಾಗಿ ನಾವು ನೂತನ ಮಾರ್ಗದಲ್ಲಿ ನಡೆಯುತ್ತಿದ್ದೇವೆ – ಶರೀರಕ್ಕನುಸಾರವಾಗಿ ಅಲ್ಲ, ಆತ್ಮಕ್ಕನುಸಾರವಾಗಿ. ದೇವರು ಆತನ ವಿವಿಧ ಸದಸ್ಯರನ್ನು ವಕ್ತಾರರುಗಳನ್ನಾಗಿ ಉಪಯೋಗಿಸಬಹುದಾದರೂ ಆತನು ಮಾತ್ರವೇ ನಮ್ಮ ದಕ್ಷ ಮಾರ್ಗದರ್ಶಿ ಮತ್ತು ನಿರ್ದೇಶಕ. –***"ನೀವು ಬಲಕ್ಕಾದರೂ ಎಡಕ್ಕಾದರೂ ತಿರುಗಿಕೊಳ್ಳುವಾಗ ಇದೇ ಮಾರ್ಗ, ಇದರಲ್ಲೇ ನಡೆದುಕೊಳ್ಳಿರಿ ಎಂದು ನಿಮ್ಮ ಹಿಂದೆ ಆಡುವ ಮಾತು ನಿಮ್ಮ ಕಿವಿಗೆ ಬೀಳುವುದು"*** (ಯೆಶಾಯ ೩೦:೨೧) .

### ***" ಹೌದು, ನಾನು ನನ್ನನ್ನು ತೀರ್ಪುಮಾಡಿಕೊಳ್ಳುವುದಿಲ್ಲ - ನನ್ನನ್ನು ತೀರ್ಪುಮಾಡುವಾತನು ಕರ್ತನೇ"***

ನೂತನ ಸೃಷ್ಟಿಯಲ್ಲಿ ಕೆಲವರು, ಗಮನೀಯವಾಗಿ ಕೆಲವರು ಮಾತ್ರವೇ ತಮ್ಮನ್ನು ನಿಷ್ಕಾರುಣ್ಯವಾಗಿ ತೀರ್ಪುಮಾಡಿಕೊಳ್ಳುವ ಒಲವು ತೋರುತ್ತಾರೆ. ಅವರು ತಮ್ಮ ಎಲ್ಲಾ ತಪ್ಪುಗಳನ್ನೂ, ಬಲಹೀನತೆಗಳನ್ನು ಯುಕ್ತವಾಗಿ ತಮ್ಮನ್ನು ಟೀಕಿಸಿಕೊಳ್ಳುತ್ತಾರೆ ಮತ್ತು ತಮ್ಮ ನಿಂದನೆಗಳಿಂದ ಬಿಡುಗಡೆಹೊಂದುವ ಇಚ್ಛೆಯುಳ್ಳವರಾಗಿರುತ್ತಾರೆ. ಆದರೆ ದೇವರು ನಮ್ಮನ್ನು ಶಾರೀರಿಕವಾಗಿ ಅಲ್ಲ, ಆತ್ಮೀಕ ರೀತಿಯಿಂದ ನಮ್ಮ ಉದ್ದೇಶ, ಚಿತ್ತ, ಇಚ್ಛೆ ಮತ್ತು ಪ್ರಯತ್ನ ಇವುಗಳನ್ನೆಲ್ಲಾ ತಿಳಿದಿದ್ದಾನೆ, ಮತ್ತು ಅವುಗಳಿಗನುಸಾರವಾಗಿಯೇ ತೀರ್ಪುಮಾಡುವವನಾಗಿದ್ದಾನೆ ಎಂಬುದನ್ನು ಅಸಮಂಜಸವಾಗಿ ಮರೆತುಬಿಡುತ್ತಾರೆ. ಅವರು " ಆ ಮತ್ತೊಬ್ಬನಂತೆ ನಾನಲ್ಲದಿರುವುದಕ್ಕಾಗಿ ನಿನಗೆ ಸ್ತೋತ್ರ ಸಲ್ಲಿಸುತ್ತೇನೆ" ಎಂಬ ಫರಿಸಾಯನ ಮಾತಿಗೆ ಅವರು ಹೆಚ್ಚಿನ ಗಮನ ಕೊಡುವವರಾಗಿದ್ದಾರೆ ಮತ್ತು ಅಂಗೀಕಾರದ ನೆಲೆಯ ಬಗ್ಗೆ ಮತ್ತು ಎಲ್ಲಾ ಪಾಪಗಳನ್ನು ನಿವಾರಣೆಮಾಡುವ ಆತನ ಅಮೂಲ್ಯ ರಕ್ತದ ಪಾವಿತ್ರತೆಯ ಬಗ್ಗೆ ಕರ್ತನ ಸ್ಫೂರ್ತಿಧಾಯಕವಾದ ಮಾತುಗಳನ್ನು ಲಕ್ಷಿಸುವುದಿಲ್ಲ. ಒಂದುವೇಳೆ ಅವರು ಸಮರ್ಪಕರಾಗಿದ್ದರೆ ಅಥವಾ ಎಲ್ಲವನ್ನು ಸಮರ್ಪಕವಾಗಿ ಮಾಡಬಲ್ಲವರಾಗಿದ್ದರೆ ಒಬ್ಬ ರಕ್ಷಕನ, ಒರ್ವ ಮಧ್ಯಸ್ಥಿಕೆಗಾರನ ಅವಶ್ಯಕತೆ ಇದ್ದಿರಲಿಲ್ಲ ಎಂಬ ಸಂಗತಿಯನ್ನು ಅವರ ವಿವೇಚನೆಯಲ್ಲಿ ಅವರು ಮರೆತುಬಿಡುತ್ತಾರೆ. " ನೀವು ಕೃಪೆಯಿಂದಲೇ ನೀತಿನಿರ್ಣಯ ಹೊಂದಿದ್ದೀರಿ, ದೇಹದ ಕರ್ಮಗಳಿಂದಲ್ಲ" ಎಂಬುದನ್ನೂ ಅವರು ಮರೆತುಬಿಡುತ್ತಾರೆ.

***“ನನಗಾದರೋ ನಿಮ್ಮಿಂದಾಗಲಿ ಮನುಷ್ಯರು ನೇಮಿಸುವ ದಿನದಲ್ಲಾಗುವ ನ್ಯಾಯಸಭೆಯಿಂದಾಗಲಿ ವಿಚಾರಣೆಯಾಗುವುದು ಅತ್ಯಲ್ಪ ಕಾರ್ಯವಾಗಿದೆ ; ನಾನೂ ನನ್ನನ್ನು ವಿಚಾರಿಸಿಕೊಳ್ಳುವುದಿಲ್ಲ. ನನ್ನಲ್ಲಿ ದೋಷವಿದೆಯೆಂದು ನನ್ನ ಬುದ್ದಿಗೆ ತೋರುವುದಿಲ್ಲವಾದರೂ ದೋಷವಿಲ್ಲದವನೆಂಬ ನಿರ್ಣಯವು ಇದರಿಂದಾಗುವುದಿಲ್ಲ ; ನನ್ನನ್ನು ವಿಚಾರಣೆಮಾಡುವವನು ಕರ್ತನೇ. ಆದದರಿಂದ ಕಾಲಕ್ಕೆ ಮೊದಲು ಯಾವುದನ್ನೂ ಕುರಿತು ತೀರ್ಪುಮಾಡಬೇಡಿರಿ ; ಕರ್ತನು ಬರುವತನಕ ತಡೆಯಿರಿ. ಆತನು ಕತ್ತಲೆಯಲ್ಲಿರುವ ಗುಪ್ತಕಾರ್ಯಗಳನ್ನು ಬೆಳಕಿಗೆ ತರುವನು, ಹೃದಯದ ಯೋಚನೆಗಳನ್ನು ಪ್ರತ್ಯಕ್ಷಪಡಿಸುವನು”*** (೧ ಕೊರಿ ೪: ೩-೫) ಎಂಬ ಅಪೋಸ್ತಲನ ಮಾತುಗಳನ್ನು ಅವರು ತಮಗೆ ಅನ್ವಯಿಸಿಕೊಳ್ಳುವ ಅಗತ್ಯತೆ ಇದೆ.

ನಮ್ಮ ಭರವಸೆಯು ಕರ್ತನಲ್ಲಿಯೇ ಹೊರತು ನಮ್ಮ ಬಲಹೀನವಾದ, ಪತನಗೊಂಡ ಶರೀರದ ಮೇಲೆ ಅಲ್ಲ. ಆತನನ್ನು ನಂಬುವವರ ಮತ್ತು ಪ್ರೀತಿಯ ಆತ್ಮನಲ್ಲಿ ನಡೆಯುವವರ ಮೇಲೆ ನಾವು ದೇವರ ಕೃಪೆ ಮತ್ತು ಕರುಣೆಗಳನ್ನು ನಾವು ಕಲಿತುಕೊಂಡಿದ್ದೇವೆ. ಆದರೂ ಅದರ ನಿರೀಕ್ಷೆಯ ಮಟ್ಟದ್ದಲ್ಲಿ ನಡೆಯಲು ಅಶಕ್ತರಾಗಿದ್ದೇವೆ. ಆದುದರಿಂದ ನಾವು ಶರೀರದಲ್ಲಿ ಸಮರ್ಥರೆಂದು ನಿರೀಕ್ಷಿಸದೆ, ಆತ್ಮದಲ್ಲಿಯೂ ಉದ್ದೇಶದಲ್ಲಿಯೂ ಸಮರ್ಥರು ಮತ್ತು ನಮ್ಮ ನಂಬಿಕೆ ಮತ್ತು ಉತ್ಸುಕತೆ ನಮ್ಮ ವಿಮೋಚಕನ ಅರ್ಹತೆಯ ಮೂಲಕ ಪ್ರತಿನಿತ್ಯ ನಾವು ದ್ವೇಷಿಸುವ ಮತ್ತು ವಿರುದ್ಧ ಹೆಣಗಾಡುವ ನಮ್ಮ ನಿಜವಾದ ಕಳಂಕವನ್ನು ನಿವಾರಿಸುವುದು ಎಂದು ನಿರೀಕ್ಷಿಸುತ್ತೇವೆ. ನಾವು ಈ ಸಂಗತಿಗಳನ್ನು ಪರಿಶೀಲಿಸುವಾಗ – ಇತರರಂತೆ ಸ್ವಾಭಾವಿಕವಾಗಿ ನಾವು ಸಹಾ ಕ್ರೋಧದ ಮಕ್ಕಳಾಗಿರುವಾಗ ದೇವರು ನಮ್ಮನ್ನು ಪ್ರೀತಿಸುತ್ತಾನೆಯೋ? ಆತನು ನಮಗೋಸ್ಕರ ಸಹಾಯಮಾಡುವ ಮನಸ್ಸುಳ್ಳವನಾಗಿದ್ದಾನೋ ಮತ್ತು ನಮ್ಮೆಲ್ಲ ಉತ್ತಮ ಅಪೇಕ್ಷೆ ಮತ್ತು ಪ್ರಯತ್ನಗಳನ್ನು ಅವು ಒಂದು ವೇಳೆ ಪಾರ್ಶ್ವ ಫಲಿತಾಂಶಗಳನ್ನು ಅಥವಾ ಪೂರ್ಣ ವಿಫಲತೆಯನ್ನು ಉಂಟುಮಾಡಿದರೂ ಅವುಗಳನ್ನು ಆತನು ಮೆಚ್ಚಿಕೊಳ್ಳುತ್ತಾನೋ? ಎಂಬ ಪ್ರಶ್ನೆಗಳನ್ನು ಕೇಳುತ್ತೇವೆ. ಹೌದು, ಕರ್ತನು ಉತ್ತರಿಸುವುದೇನೆಂದರೆ “ ದೇವರು ತಾನೇ ನಿಮ್ಮನ್ನು ಪ್ರೀತಿಸುತ್ತಾನೆ”. ಅಪೋಸ್ತಲನು ಇದಕ್ಕೆ ಕೂಡಿಸಿ ಹೇಳುವುದೇನೆಂದರೆ – “ ನಾವು ಪಾಪಿಗಳಾಗಿದ್ದಾಗ್ಯೂ ದೇವರು ನಮ್ಮನ್ನು ಪ್ರೀತಿಸಿ ತನ್ನ ಒಬ್ಬನೇ ಮಗನನ್ನು ನಮ್ಮ ವಿಮೋಚನೆಗಾಗಿ ಕೊಟ್ಟಿರುವಾಗ ಆತನೊಡನೆ ನಮಗೆ ಎಲ್ಲವುಗಳನ್ನೂ (ಸುವಾರ್ತೆಯಲ್ಲಿ ನಿಗದಿಪಡಿಸಿರುವ ಬಹುಮಾನವನ್ನು ಹೊಂದಿಕೊಳ್ಳಲು ಅಗ್ತ್ಯವಾದುದೆಲ್ಲವನ್ನೂ) ನೀಡಬಲ್ಲನಲ್ಲವೆ?” ನಿಶ್ಚಯವಾಗಿಯೂ, ಆತನು ನಾವು ಪಾಪಿಗಳಾಗಿರುವಾಗಲೇ ನಮ್ಮನ್ನು ಪ್ರೀತಿಸಿರುವುದರಿಂದ, ಆತನು ಕರುಣಾರ್ಧ ಹೃದಯದಿಂದ ಇನ್ನೂ ಹೆಚ್ಚಾಗಿ ನಮ್ಮನ್ನು ಪ್ರೀತಿಸಬಲ್ಲನು – ಈಗ ಆತನು ನಮ್ಮನ್ನು ತನ್ನ ಕುಟುಂಬಕ್ಕೆ ದತ್ತು ಸ್ವೀಕಾರ ಮಾಡಿಕೊಂಡಿದ್ದಾನೆ. ಆತನು ಚಿತ್ತವನ್ನು ನೆರವೇರಿಸುವ ನಿಷ್ಟಾವಂತಿಕೆಯನ್ನು ಆತನು ಈಗ ನಮ್ಮಲ್ಲಿ ಗುರುತಿಸಿದ್ದಾನೆ. ಹೀಗಿರುವುದರಿಂದ ನಾವು ಒಳ್ಳೆಯ ನಂಬಿಕೆಯುಳ್ಳವರಾಗಿ ಆತನ ಪರಲೋಕದ ಕೃಪಾಸಾನವನ್ನು ಧೈರ್ಯದಿಂದ ಸಮೀಪಿಸೋಣ – ***“ಆತನ ಕರುಣೆಯನ್ನು ಹೊಂದುವಂತೆಯೂ ಆತನ ಸಮಯೋಚಿತವಾದ ಸಹಾಯವು ನಮಗೆ ದೊರೆಯುವಂತೆಯೂ ಧೈರ್ಯದಿಂದ ಕೃಪಾಸಾನದ ಮುಂದೆ ಬರೋಣ”*** (ಇಬ್ರಿ ೪:೧೬).

ಹೀಗಿದ್ದಾಗ್ಯೂ, ಈ ಪ್ರಶ್ನೆಯ ಮತ್ತೊಂದು ಬದಿಗೆ ಎಚ್ಚರಿಕೆಯ ಮಾತೊಂದು ಅಗತ್ಯವಿದೆ. ದೇವರ ಬಗ್ಗೆ ಅಂಜಿಕೆಯನ್ನೂ, ಅವಿಶ್ವಾಸವನ್ನೂ ಉಂಟುಮಾಡಿ ಲಜ್ಜೆಗೆಟ್ಟ ಸ್ವಯಂ ಭರವಸೆಯ ವಿರೋಧ ಪರಿಸ್ಥಿತಿಗೆ ಎಡೆಮಾಡಿಕೊಟ್ಟ ಎಲ್ಲಾ ದೈನ್ಯ ಮತ್ತು ಭರವಸಹೀನ ಸಂಧರ್ಭಗಳ ಬಗ್ಗೆ ನಮಗೆ ತಿಳಿದಿದೆ. ಇವು ನಮ್ಮ ಎಲ್ಲಾ ತಪ್ಪುಗಳನ್ನು ಪೂರ್ಣವಾದ ಅಂಧಕಾರದಲ್ಲಿಟ್ಟು ಮತ್ತೊಬ್ಬ ವ್ಯಕ್ತಿಗಿಂತ ತಾನು ಉತ್ತಮನಾಗಿರುವುದಕ್ಕಾಗಿ ದೇವರಿಗೆ ಸ್ತೋತ್ರ ಸಲ್ಲಿಸಿದ ಆ ಫರಿಸಾಯನ ವರ್ತನೆಗೆ ಸಮವಾಗಿದೆ. ಅಯ್ಯೋ! ಇದೊಂದು ಅತ್ಯಂತ ಶೋಚನೀಯ ಮತ್ತು ಆಶಾರಹಿತವಾದ ದುಸ್ಥಿತಿಯಾಗಿದೆ ಎಂದು ನಾವು ಅಂಜುತ್ತೇವೆ. ವಿಶ್ವಾಸವು ಅಗತ್ಯ. ಆದರೂ ಈ ವಿಶ್ವಾಸವು ದೇವರ

ಮೇಲೆ ಇರತಕ್ಕದ್ದೇ ಹೊರತು ಸ್ವಂತಿಕೆಯ ಮೇಲಲ್ಲ. ಇಂಥಾ ಬಾಗುವಿಕೆಯ ಸಂಧರ್ಭಗಳು ಪ್ರೀತಿಯ ನಿಯಮವೆಂಬ ಸುವರ್ಣ ನಿಯಮವನ್ನು ನಿರ್ಲಕ್ಷಿಸಿದಾಗ ಸಾಮಾನ್ಯವಾಗಿ ಕಂಡುಬರುತ್ತದೆ. ದೇವರ ಪ್ರೀತಿಯ, ಆತನ ಕೃಪಾಯೋಜನೆಯ ಮೇಲಣ ಪ್ರೀತಿಯ, ನೂತನ ಸೃಷ್ಟಿಯ ಸಹೋದರುಗಳ ಮೇಲಿನ ಆತನ ಪ್ರೀತಿಯ ಮತ್ತು ಮಾನವಕುಲದ ಮೇಲೆ ಇರುವ ಸಹಾನುಭೂತಿಯ ಪ್ರೀತಿಯ ಉಚಿತ ಮೇರೆಯನ್ನು ಮೀರುವುದೇ ಸ್ವಯಂ ಪ್ರೀತಿ, ಸ್ಯಯಂ ಪ್ರಾಮುಖ್ಯತೆ. ಸ್ವಯಂ ಗೌರವ ಮತ್ತು ಸ್ವಯಂ ವೈಭವೀಕರಣವಾಗಿದೆ. ನಾವು ಈ ಸೀಳುದಾರಿಯ ಬಗ್ಗೆ ಎಚ್ಚರಿಕೆಯಿಂದಿರೋಣ. ಇದು ನಮ್ಮನ್ನು ಕರ್ತನಿಂದ ದೂರಮಾಡುವುದಲ್ಲದೆ ಆತನ ಆತ್ಮ ಮತ್ತು ರಾಜ್ಯದಿಂದಲೂ ನಮ್ಮನ್ನು ದೂರಮಾಡುತ್ತದೆ. ನಾಯಕರುಗಳು ವಿಶೇಷವಾಗಿ ಈ ಕುಣಿಕೆಗೆ ಬೀಳಬಹುದಾದರೂ, ಇತರರೂ ಅದಕ್ಕೆ ತುತ್ತಾಗಬಹುದಾಗಿದೆ. ಬೋಧಕರುಗಳು ಅವರ ಶಾರೀರಿಕ ಮನಸ್ಸುಗಳಲ್ಲಿ ಉಬ್ಬಿಹೋಗಿರುವುದು ಅವರಲ್ಲಿನ ಪ್ರತಿಯೊಂದು ಅರ್ಹತೆಯಲ್ಲಿರುವ ಒಂದು ಕೊರತೆಯಾಗಿಗಿದೆ ಎಂಬುದು ವಿಷಾದಕರ. –***"ಅವನು ಒಂದನ್ನೂ ತಿಳಿಯದೆ ಕುತರ್ಕ ವಾಗ್ವಾದವನ್ನು ಮಾಡುವ ಭ್ರಾಂತಿಯಲ್ಲಿದ್ದು ಮದದಿಂದ ಕಣ್ಣುಕಾಣದವನಾಗಿದ್ದಾನೆ. ಇವುಗಳಿಂದ ಹೊಟ್ಟೆಕಿಚ್ಚು, ಜಗಳ. ದೂಷಣೆ, ದುಸ್ಸಂಶಯ ಇವುಗಳು ಉಂಟಾಗುತ್ತವೆ . . . . ಸಂತುಷ್ಟಿಸಹಿತವಾದ ಭಕ್ತಿಯು ದೊಡ್ಡ ಲಾಭವೇ ಸರಿ"*** (೧ ತಿಮೋ ೫:೪೦೬, ಯೋಹಾನ ೩:೯,೧೦ ವಚನಗಳನ್ನೂ ನೋಡಿರಿ)

## *ಸಭೆಯು ಕೆಲವು ಸಂಗತಿಗಳ ಬಗ್ಗೆ ನಿರ್ಣಯಿಸಬೇಕು*

ವ್ಯಕ್ತಿಗತವಾಗಿ ನಾವು ತೀರ್ಪು ಅಥವಾ ನಿಂದನೆಯನ್ನು ಮಾಡಲಾಗದು ಆದರೆ ತನ್ನ ದೇಹವಾದ ಸಭೆಯ ಪ್ರತಿಯೊರ್ವ ಸದಸ್ಯನ ಬಗ್ಗೆ ಅಂದರೆ ನೂತನ ಸೃಷ್ಟಿಯ ಬಗ್ಗೆ ಆತನ ನಿರ್ಣಯವನ್ನು ಪ್ರಕಟಿಸುವವರೆಗೂ ಕಾಯಬೇಕು ಎನ್ನುವಾಗ ಕೆಲವೊಂದು ಪ್ರಕರಣಗಳಲ್ಲಿ ಸಭೆಯು ತೀರ್ಪುಮಾಡಲು ಕರ್ತವ್ಯಬದ್ಧವಾಗಿರುತ್ತದೆ. ನೀತಿಯ ವಿರುದ್ಧವಾಗಿ ಎಸಗಿದ ಹಾದರವನ್ನು ತಪ್ಪಿತಸ್ಥನು ಸಾರ್ವಜನಿಕವಾಗಿ ಒಪ್ಪಿಕೊಂಡ ಮತ್ತು ಸಮಗ್ರ ಸಭೆಗೂ ಅದು ತಿಳಿದಿರುವ ಪ್ರಕರಣವೊಂದನ್ನು ಉದಾಹರಣೆಯಾಗಿ ಅಪೋಸ್ತಲನು ನೀಡುತ್ತಾ ಅಂಥಾ ಒಪ್ಪಿಕೊಂಡ ವ್ಯಭಿಚಾರಿಯ ಒಡನಾಟ ಮಾಡುವಲ್ಲಿ ಸಭೆಯು ತಪ್ಪುಮಾಡುತ್ತಿದೆ, ತತ್ಕ್ಷಣದಲ್ಲಿ ತಪ್ಪಿತಸ್ಥನನ್ನು ಭಹಿಷ್ಕರಿಸಬೇಕು, ವಿಶ್ವಾಸಿಗಳ ಸಾಂಗತ್ಯದಿಂದ ಆತನನ್ನು ದೂರೀಕರಿಸಬೇಕು ಮತ್ತು ಸಾಂಕೇತಿಕವಾಗಿ ಆತನನ್ನು ದಂಡನೆಗಾಗಿ ಮತ್ತು ಆತನ ವಿಷಯಲಂಪಟತನದ ನಾಶನಕ್ಕಾಗಿ ಸೈತಾನನಿಗೆ ಒಪ್ಪಿಸಬೇಕು – ***"ಕರ್ತನಾದ ಯೇಸುವಿನ ಪ್ರತ್ಯಕ್ಷತೆಯ ದಿನದಲ್ಲಿ ಅಂಥವನ ಆತ್ಮವು ರಕ್ಷಣೆಹೊಂದುವುದಕ್ಕಾಗಿ ಆತನ ಶರೀರಭಾವವು ನಾಶವಾಗಬೇಕೆಂದು ನಮ್ಮ ಕರ್ತನಾದ ಯೇಸುವಿನ ಹೆಸರಿನಲ್ಲಿ ಅವನನ್ನು ಸೈತಾನನಿಗೆ ಒಪ್ಪಿಸಿಕೊಡಬೇಕು"*** (೧ ಕೊರಿ ೦೫:೫) ಎಂದಿದ್ದಾನೆ.

ಕರ್ತನು ಮಾತ್ರವೇ ಅಥವಾ ಆತನ ಅಪೋಸ್ತಲರಲ್ಲಿ (ಹನ್ನೆರಡು ಮಂದಿಯಲ್ಲಿ ಕಡೆಯವನಾಗಿ ಯೂದನ ಬದಲಿಗೆ ಕ್ರಿಸ್ತನು ಆರಿಸಿಕೊಂಡ ಪೌಲನೂ ಸೇರಿ) ಒಬ್ಬನಿಗೆ ಮೇಲೆ ಪ್ರಕಟಪಡಿಸಿದಂತೆ ಮುಂದುವರೆಯುವ ಅಧಿಕಾರವಿದೆ. ಪೇತ್ರನು ಅನನೀಯ ಮತ್ತು ಸೈಫೈರಳ ವಿಷಯದಲ್ಲಿ ಪೇತ್ರನು ನಡಕೊಂಡಂತೆ (ಅ.ಕೃ. ೦೫:೦೧–೧೧ ನೋಡಿರಿ) ನಡೆಯುವ ಹಕ್ಕು ಅಪೋಸ್ತಲನೊಬ್ಬನಿಗೆ ಮಾತ್ರವೇ ಇದೆ. ಅಪೋಸ್ತಲನನಾದ ಪೌಲನು ತನ್ನ ಪರಿಸ್ಥಿಯ ಬಗ್ಗೆ ಮುಂದುವರೆದು ***"ಜಾರರ ಸಹವಾಸ ಮಾಡಬಾರದೆಂದು ನನ್ನ ಪತ್ರಿಕೆಯಲ್ಲಿ ಬರೆದಿದ್ದೆನಷ್ಟೆ. ಈ ಲೋಕದಲ್ಲಿರುವ ಜಾರರು, ಲೋಭಿಗಳು, ಸುಲುಕೊಳ್ಳುವವರು, ವಿಗ್ರಹಾರಾಧಕರು ಇವರ ಸಹವಾಸವನ್ನು ಬಿಟ್ಟುಬಿಡಬೇಕೆಂದು ನನ್ನ ತಾತ್ಪರ್ಯವಲ್ಲ ; ಹಾಗೆ ಬಿಡಬೇಕಾದರೆ ನೀವು ಈ ಲೋಕವನ್ನೇ ಬಿಟ್ಟುಹೋಗಬೇಕಾಗುವುದು"*** (೧ ಕೊರಿ೫:೯–೧೦) ಎಂದಿದ್ದಾನೆ. ಅಪವಿತ್ರರೊಡನೆ ವ್ಯವಹಾರಗಳನ್ನಿಟ್ಟು ಕೊಳ್ಳುವುದು ಅವರನ್ನು ನೂತನ ಸೃಷ್ಟಿಗಳ ಸಾಗಂತ್ಯದಲ್ಲಿ ಗುರಿತಿಸಿಕೊಳ್ಳುವುದಕ್ಕಿಂತಲೂ ಸಂಪೂರ್ಣ ವಿಭಿನ್ನವಾದುದು

ಎಂದು ಅವರು ಕಂಡುಕೊಳ್ಳಬೇಕೆಂದು ಆತನು ಬಯಸುತ್ತಾನೆ. ತಪ್ಪಿತಸ್ಥನ ನೀತಿಮಟ್ಟವನ್ನು ಕೆಳಗಿಳಿಸುವುದು ಸಹಾ ಸೌಜನ್ಯವೇನಲ್ಲ ; ತನ್ನ ಅಶುದ್ಧತ್ವವು ತನ್ನನ್ನು ದೇವಜರಿಂದ ದೂರಮಾಡಿದೆ ಎಂಬುದು ತನಗೆ ಲಾಭದಾಯಕವೆಂದು ಆತನು ಭಾವಿಸುತ್ತಾನೆ. ನಿಜವಾಗಿಯೂ ಆತನು ದೇವರಾತ್ಮನಿಂದ ಪಡಕೊಂಡವನೇ ಆಗಿದ್ದರೆ ಆತನ ತನ್ನ ನಿಜವಾದ ಸ್ಥಾನವನ್ನು ಬಹು ತ್ವರಿತವಾಗಿ ಮತ್ತು ಚುರುಕಾಗಿ ಗ್ರಹಿಸಿಕೊಳ್ಳುತ್ತಾನೆ, ಪಾಠವನ್ನು ಕಲಿಯುತ್ತಾನೆ ಮತ್ತು ಪಶ್ಚಾತ್ತಾಪ ಪಡುತ್ತಾನೆ. ತಪ್ಪಿತಸ್ಥರ ಬಗ್ಗೆ ಔದರ್ಯತೋರುವ ತಪ್ಪು ಪದ್ದತಿಯೊಂದು ಸಭೆಯ ಅಭ್ಯಾಸವಾಗಿಹೋಗಿದೆ. ಈ ರೀತಿಯಾಗಿ ಅದು ಸದಸ್ಯರ ಸಾಮಾನ್ಯವಾದ ನೀತಿಭ್ರಷ್ಟತೆಗೆ ಕಾರಣವಾಗಿದೆ ಮತ್ತು ಅಂಥಾಃ ಒಂದು ಸಾಂಕ್ರಾಮಿಕ ವಾತಾವರಣವನ್ನು ಇತರ ಸಭೆಗಳಲ್ಲಿಯೂ ಉಂಟುಮಾಡಬಹುದಾಗಿದೆ ಅವರು ಕೊರಿಂಥ ಸಭೆಯಲ್ಲಿ ಪ್ರಭಲವಾಗಿದ್ದ ಪರಿಸ್ಥಿತಿಯ ಬಗ್ಗೆ ಅರಿತುಕೊಳ್ಳುತ್ತಾರೆ.

ಇಂಥಾಃ ಪ್ರಕರಣಗಳಲ್ಲಿ ವಿಶ್ವಾಸಿಗಳ ಕರ್ತವ್ಯಗಳ ಬಗ್ಗೆ ಅಪೋಸ್ತಲನು ಕೆಲವು ಮುಖ್ಯ ಅಂಶಗಳನ್ನು ನೀಡುತ್ತಾನೆ ಮತ್ತು ನಾವು ಆತನ ಮಾತುಗಳಿಗೆ ಈ ರೀತಿಯಾಗಿ ಭಾವಾರ್ಥಮಾಡುತ್ತೇವೆ : ನಾನು ನಿಮಗೆ ಬರೆದಿರುವುದೇನೆಂದರೆ, "ಸಹೋದರನು" ಎಂದೆನಿಸಿಕೊಳ್ಳುವ ಒಬ್ಬನು ವ್ಯಭಿಚಾರಿಯೂ, ಲೋಭಿಯೂ ಅಥವಾ ವಿಗ್ರಹಾರಾಧಕನೂ ಆಗಿದ್ದರೆ, ಇಲ್ಲವೆ ಬಯ್ಯುವವನೂ, ಕುಡಿಕನೂ ಅಥವಾ ಸುಲುಕೊಳ್ಳುವವನೂ ಆಗಿದ್ದರೆ ಅಂಥವನ ಸಹವಾಸವನ್ನು ಮಾಡಬಾರದು, ಆತನೊಡನೆ ಕೂತು ಊಟಮಾಡುವಷ್ಟರ ಮಟ್ಟಿಗೂ ಅಲ್ಲ. ನಿಜವಾಗಿಯೂ ನಾನು ಈ ಲೋಕದವರನ್ನು ತೀರ್ಪುಮಾಡುವ ಪ್ರಯತ್ನವನ್ನೇನೂ ಮಾಡುತ್ತಿಲ್ಲ : ಆದರೆ ಸಭೆಯವರಾದ ನೀವು ನಿಮ್ಮ ಸಹೋದರರನ್ನಾಗಿ ಅಂಗೀಕರಿಕೊಂಡವರ ತೀರ್ಪು ಮಾಡಬೇಕು. ದೇವರು ಅನ್ಯರ ತೀರ್ಪುಮಾಡುವವನಾಗಿದ್ದಾನೆ ; ಕೆತ್ತವರನ್ನು ನಿಮ್ಮ ಸಹವಾಸದಿಂದ ದೂರಮಾಡುವುದು ನಿಮ್ಮ ಕರ್ತವ್ಯವಾಗಿದೆ (೧ ಕೊರಿ ೫ನೇ ಅಧ್ಯಾಯ ಓದಿರಿ).

ಅಪೋಸ್ತಲನು ಈ ವಾದವನ್ನು ಮುಂದುವರಿಸುತ್ತಾ ಇಬ್ಬರು ಸಹೋದರರುಗಳಿಗೆ ಮನಸ್ತಾಪವಿದ್ದಾಗ ಸಹಿಸಿಕೊಳ್ಳಬಹುದಾದ ತಪ್ಪನ್ನು ತಾಳ್ಮೆಯಿಂದ ಸಹಿಸಿಕೊಳ್ಳುವ ಅಥವಾ ಸಹಿಸಿಕೊಳ್ಳಲು ಅಸಾಧ್ಯವಾಗಿದ್ದಲ್ಲಿ ಕದೇ ಪ್ರಯತ್ನವಾಗಿ ಸಭೆಯ ತೀರ್ಮಾನಕ್ಕೆ ಅದನ್ನು ಕೊಂಡೊಯ್ಯುವುದರ ಬದಲಾಗಿ ನ್ಯಾಯಕ್ಕಾಗಿ ಈ ಲೋಕದ ನ್ಯಾಯಾಲಯಗಳ ಮೊರೆಹೋಗುವ ಪ್ರವೃತ್ತಿ ಇದೆ ಎಂಬುದಾಗಿ ಟೀಕಿಸುತ್ತಾನೆ. ದೇವರು ಸಭೆಯನ್ನು ಭವಿಷ್ಯದಲ್ಲಿ ಈ ಲೋಕದ ನ್ಯಾಯಾಲಯ ಎಂಬುದಾಗಿ ಆಯ್ಕೆಮಾಡುವುದಾದರೆ ಅದರ ಸದಸ್ಯರುಗಳು ಈಗಲೂ ಸಹಾ ಈ ಲೋಕದವರ ತೀರ್ಮಾನಕ್ಕಿಂತ ನಿಶ್ಚಯವಾಗಿ ಯಾವುದಕ್ಕೂ ಕಡಿಮೆಯಾದವರಲ್ಲ. ಸಭೆಯಲ್ಲಿ ಅಲ್ಪಗಣನೆ ಯಲ್ಲಿರುವವರು ಸಹಾ ಇಂಥಾಃ ವಿಷಯಗಳಲ್ಲಿ ನಂಬಿಕೆಗೆ ಅರ್ಹರಾಗಿರಬೇಕು. ಎಲ್ಲರೂ ಸಂಶಯಪಡದೆ ನಂಬಲರ್ಹವಾದ ಬುದ್ದಿವಂತನೂ ಪ್ರಾಮಾಣಿಕನೂ ಅದ ಮತ್ತು ಆತನ ನಿರ್ಣಯಕ್ಕೆ ಜಗಳವಾಡುವವರು ತಲೆಬಾಗಬಹುದಾದ ಒಬ್ಬನದರೂ ನಿಮ್ಮಲ್ಲಿ ಇಲ್ಲವೋ?

ಹಾಗಾದರೆ ನೀವು ಬಹುಮಟ್ಟಿಗೆ ತಪ್ಪನ್ನು ತೆಗೆದುಕೊಳ್ಳುವುದಾದರೂ ಯಾಕೆ? ತೀರ್ಪು ನ್ಯಾಯಯುತವಾಗಿಲ್ಲ ವಾದರೂ ಯಾಕೆ ನೀವು ಅನ್ಯಾಯವನ್ನು ಯಾಕೆ ಸಹಿಸಬಾರದು ? ಒಬ್ಬರ ಮೇಲೆ ಒಬ್ಬರು ಜಗಳಮಾಡುವುದನ್ನು ಅಥವಾ ಸಾರ್ವಜನಿಕ ನ್ಯಾಯಾಸ್ಥಾನಗಳಲ್ಲಿ ಪರಸ್ಪರ ದೋಷಾರೋಪಣೆ ಮಾಡುವದನ್ನು ಶಾಶ್ವತಮಾಡಿಕೊಳ್ಳದೆ ಯಾಕೆ ನಷ್ಟವನ್ನು ಸಹಿಸಿಕೊಳ್ಳಬಾರದು? ಕೂಡದು ಎಂಬುದಾಗಿ ಅಪೋಸ್ತಲನು ಹೇಳುತ್ತಾನೆ. ಕ್ರಿಸ್ತನ ದೇಹದಲ್ಲಿ ಶಾಂತಿ ಮತ್ತು ಸಾಮರಸ್ಯಗಳಿಗಾಗಿ ನೀವು ಅನ್ಯಾಯವನ್ನು ಸಹಿಸಿಕೊಳ್ಳಲು ಇಷ್ಟಪಡುವುದಿಲ್ಲ ಮಾತ್ರವಲ್ಲ ಅದಕ್ಕಿಂತಲೂ ಹೆಚ್ಚಿನ ಕೆಡಕು ಮತ್ತು ಹೆಚ್ಚಾದುದು ಇದೆ . ನಿಮ್ಮಲ್ಲಿ ಕೆಲವರು ತಪ್ಪು ಮತ್ತು ವಂಚನೆಯನ್ನು ಅವರ ಸಹೋದರರ ಸಂಗಡಲೂ ಮಾಡುವವರಿದ್ದಾರೆ. ಕರ್ತನ ಸಭೆಯಾಗಿ ನೀವು ಆತನ ರಾಜ್ಯವನ್ನು ಬಯಸುವುದಿಲ್ಲವೋ? – **"ಅನ್ಯಾಯಗಾರರು ದೇವರ ರಾಜ್ಯಕ್ಕೆ ಬಾಧ್ಯರಾಗುವುದಿಲ್ಲವೆಂದು ನಿಮಗೆ ತಿಳಿಯದೋ? ಮೋಸಹೋಗಬೇಡಿರಿ, ಜಾರರು, ವಿಗ್ರಹಾರಾದಕರು, ವ್ಯಭಿಚಾರಿಗಳು, ವಿಟರು, ಪುರುಷಗಾಮಿಗಳು, ಕಳ್ಳರು, ಲೋಭಿಗಳು, ಕುಡಿಕರು ,**

**ಬೈಯ್ಯುವವರು ಸುಲುಕೊಳ್ಳುವವರು ಇವರೊಳಗೆ ಒಬ್ಬನಾದರೂ ದೇವರ ರಾಜ್ಯಕ್ಕೆ ಭಾದ್ಯರಾಗುವುದಿಲ್ಲ. ನಿಮ್ಮಲ್ಲಿ ಕೆಲವರು ಅಂಥವರಾಗಿದ್ದೀರಿ. ಆದರೂ ಕರ್ತನಾದ ಯೇಸುಕ್ರಿಸ್ತನ ಹೆಸರಿನಲ್ಲಿಯೂ ನಮ್ಮ ದೇವರ ಆತ್ಮನಲ್ಲಿಯೂ ತೊಳೆದುಕೊಂಡಿರಿ, ದೇವಜನರಾದಿರಿ, ನೀತಿವಂತರೆಂಬ ನಿರ್ಣಯವನ್ನು ಹೊಂದಿದಿರಿ"** (೧ ಕೊರಿ ೬:೧–೧೧ ನೋಡಿ).

ದೇವರ ರಾಜ್ಯದಿಂದ ನಿಮ್ಮನ್ನು ಭಹಿಷ್ಕರಿಸುವ ಈ ಅಪರಾಧದ ಈ ಹೇಳಿಕೆಗಳು ನಿಮ್ಮನ್ನು ಸಭೆಯಲ್ಲಿನ ಸಾಂಗತ್ಯದಿಂದಲೂ ಭಹಿಷ್ಕರಿಸುವ ತಪ್ಪುಗಳಿಗೆ ಮಾರ್ಗದರ್ಶಿಯಾಗಿವೆ. ಈ ಎಲ್ಲಾ ಸಂಗತಿಗಳಿಗೆ ಅನ್ವಯವಾಗುವ ಮಾತುಗಳೇನೆಂದರೆ – ***"ಆ ದುಷ್ಟನನ್ನು ನಿಮ್ಮ ಮಧ್ಯದಿಂದ ತೆಗೆದುಹಾಕಬೇಕು"*** (೧ ಕೊರಿ ೫:೧೩). ಆತನು ಯಾರೇ ಆಗಿರಲಿ ಆತನು ಈ ಅಪರಾಧಗಳಲ್ಲಿ ಯಾವುದನ್ನಾದರೂ ಮಾಡುವವನಾಗಿದ್ದಾನೆ.

## *" ನಿನ್ನ ಸಹೋದರನು ನಿನಗೆ ವಿರೋಧವಾಗಿ ತಪ್ಪುಮಾಡುವವನಾದರೆ ?"*

"***ತೀರ್ಪುಮಾಡ ಬೇಡಿರಿ ; ಹಾಗೆ ನಿಮಗೂ ತೀರ್ಪಾಗುವುದಿಲ್ಲ***" (ಮತ್ತಾಯ ೦೭:೦೧) ಎಂಬ ಕರ್ತನ ಹೇಳಿಕೆಯೊಂದಿಗೆ ಇದು ಘರ್ಷಣೆಯಾಗುವುದಿಲ್ಲವೆ? ನಾವು ಮೊದಲಿಗೆ ತಪ್ಪು ಮಾಡುವವರನ್ನು ವ್ಯಕ್ತಿಗತವಾಗಿ ತೀರ್ಪುಮಾಡಬೇಕಲ್ಲವೆ? ನಂತರದಲ್ಲಿ ಅವರೊಂದಿಗೆ ಅವರ ತಪ್ಪುಗಳ ಬಗ್ಗೆ ಮಾತನಾಡಬಹುದು ಅಥವಾ ಹರಟೆಹೊಡೆಯಬಹುದಲ್ಲವೆ? ಅಥವಾ ಅವರೊಂದಿಗೆ ಕೆಟ್ಟದಾಗಿ ಮಾತನಾಡಿ ಸಭೆಯು ತಪ್ಪುಮಾಡಿದವರ ಬಗ್ಗೆ ತಿಳಿದು ಅವರನ್ನು ತ್ಯಜಿಸಿಬಿಡುವಂತೆ ಮಾಡಬಹುದಲ್ಲವೋ?

ದೇವರ ವ್ಯವಸ್ಥೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳುವುದಾದರೆ ಅದು ಅದರೊಂದಿಗೆ ಸಂಪೂರ್ಣವಾಗಿ ಸಾಮರಸ್ಯದಿಂದ ಎಂದಿಗೂ ಇರುವುದಿಲ್ಲ . 'ಎ' ಮತ್ತು 'ಬಿ' ರೊಂದಿಗೆ ಯಾವುದೇ ಭಿನ್ನಮತ ಇರುವುದಾದಲ್ಲಿ ಮತ್ತು 'ಎ' ಎಂಬುವವನು ತಾನು 'ಬಿ'ಯಿಂದ ಮೋಸಗೊಂಡಿದ್ದಾನೆಂದು ಭಾವಿಸುವುದಾದಲ್ಲಿ ಆತನು 'ಬಿ'ಯನ್ನು ದೂಷಿಸುವ ರೀತಿಯಲ್ಲಿ ತೀರ್ಪುಮಾಡಬಾರದು. ಆತನು "ನಮ್ಮೊಡನೆ ಭಿನ್ನಮತವಿದೆ. 'ಬಿ''ಯು ತಾನೇ ಸರಿ ಎಂದು ವಿಶ್ವಾಸದಿಂದ ಹೇಳಬಹುದಾದರೂ ನನಗೆ ನಾನೇ ಸರಿ ಎಂಬ ಖಚಿತತೆ ಇದೆ, ನಾನೇನೂ ತಪ್ಪುಮಾಡಿರುವುದಿಲ್ಲ" ಎಂದು ಹೇಳಬಹುದು. ಈ ಕಾರಣದಿಂದ 'ಎ'ಯು 'ಬಿ'ಯ ಸಹವಾಸ ತೊರೆಯುವ ಅವಶ್ಯವಿಲ್ಲ. ಹಾಗಿ ಮಾಡಿದಲ್ಲಿ ಆತನ ತೀರ್ಪು ಮಾಡಿದಂತಾಗುತ್ತದೆ, ಆತನನ್ನು ನಿಂದಿಸಿದಂತಾಗುತ್ತದೆ. 'ಎ' ತನ್ನೊಳಗೆ " ಈ ಸಂಗತಿಯು ಕ್ಷುಲ್ಲಕವಾದುದು, ಹೀಗಿದ್ದರು ಸಹೋದರರ ನಡುವೆಯಾಗಿರುವುದರಿಂದ ನಾನು ಇದನ್ನು ಬಿಟ್ಟುಬಿಡುತ್ತೇನೆ. 'ಬಿ'ಯು ಕರ್ತನಲ್ಲಿ ನನ್ನ ಸಹೋದರನಾಗಿರುವುದರಿಂದ ಉದ್ದೇಶಪೂರ್ವಕವಾಗಿ ಹೀಗೆ ಮಾಡಿರಲಾರನು. ನನ್ನ ದೃಷ್ಟಿಕೋನವೇ ಹೊರತು ಆತನದು ತಪ್ಪಾಗಿರಲಿಕ್ಕಿಲ್ಲ" ಎಂದು ಹೇಳಿಕೊಳ್ಳಬಹುದು.

ಆದಾಗ್ಯೂ, ಆತನು ಈ ದೃಷ್ಟಿಕೋನವನ್ನು ತೆಗದುಕೊಳ್ಳದೇ ಇದ್ದಾಗಲೂ ಆತನು ತೀರ್ಪುಮಾಡ ಬಾರದು, ತಾನು ಸರಿ, 'ಬಿ'ಸರಿಯಿಲ್ಲ ಎಂದು ತೀರ್ಮಾನಿಸಲೂ ಬಾರದು – ಆದರೆ 'ಬಿ'ಯಬಳಿ ಹೋಗಿ ಸಂಗತಿಗಳು ತನಗೆ ಹೇಗೆ ಕಂಡುಬರುತ್ತಿವೆ ಎಂಬುದನ್ನು ವಿವರಿಸಿ ತಿಳಿಸಬೇಕು ಮತ್ತು ಸಾಧ್ಯವಾದರೆ, ಪರಸ್ಪರ ಅನುಮತಿಗಳುಳ್ಳ ಒಂದು ರೀತಿಯ ಸಹೋದರ ಒಪ್ಪಂದಕ್ಕೆ ಬರಬೇಕು. ಆದರೆ ಅವರು ಒಪ್ಪದೇ ಹೋದಲ್ಲಿ, ಅವರು ಸಭೆಯ ಒಂದೆರಡು ಬುದ್ಧಿವಂತರನ್ನು ಬೆಟ್ಟಿಯಾಗಿ ('ಸಿ' ಮತ್ತು'ಡಿ' ಎಂಬ ಈ ಸಹೋದರರುಗಳ ನಿಷ್ಠೆಯಲ್ಲಿ 'ಎ' ಮತ್ತು 'ಬಿ' ಇವರಿಬ್ಬರೂ ವಿಶ್ವಾಸಹೊಂದಿರಬೇಕು) ಅವರೊಡನೆ 'ಎ' ಮತ್ತು 'ಬಿ' ಪರಸ್ಪರರನ್ನು ನಿಂದಿಸದೆ ನಡೆದ ಸಂಗತಿಗಳನ್ನು

ಹೇಳಿಕೊಳ್ಳಬಹುದು ಮತ್ತು ಎಲ್ಲಾ ಸಂಗತಿಗಳನ್ನು ಪರಸ್ಪರರ ಎದುರಿನಲ್ಲೇ ಚರ್ಚಿಸಿ ಅವರ ಅಭಿಪ್ರಾಯವನ್ನು ಮತ್ತು ಬುದ್ದಿಮಾತುಗಳನ್ನು ಇಬ್ಬರಿಗೂ ನೀಡುವಂತೆ ಕೇಳಿಕೊಳ್ಳಬೇಕು. ವಿಶೇಷವಾಗಿ ಎಲ್ಲರಲ್ಲಿಯೂ ಒಬ್ಬರ ಬಗ್ಗೆ ಮತ್ತೊಬ್ಬರಿಗೆ ಅಭಿಷಕ್ತ ಕುಟುಂಬದ ಸದಸ್ಯರಾಗಿ ಪ್ರೀತಿಯ ಸ್ಪೂರ್ತಿಯು ಇರುವುದಾದಲ್ಲಿ ಇದು ಎಲ್ಲರಿಗೂ ತೃಪ್ತಿಯನ್ನುಂಟುಮಾಡುತ್ತದೆ. ಆದರೆ, ಶಾಂತಿಯು ಇನ್ನೂ ಸ್ಥಾಪಿತವಾಗದೇ ಹೋದರೂ ಸಹಾ ತೀರ್ಪು ನೀಡಬಾರದು, ನಿಂದನೆ ಮಾಡಬಾರದು ; ಯಾಕೆಂದರೆ ಇಬ್ಬರು ಅಥವಾ ಮೂವರು ಸಹೋದರರಗಳು ತೀರ್ಪು ಮಾಡದೇ, ಸಮಸ್ಥ ಸಭೆಯು ಮಾತ್ರವೇ ತೀರ್ಪುಮಾಡುವುದಾಗಿದೆ.

'ಎ'ಯು 'ಸಿ' ಮತ್ತು 'ಡಿ'ಯರ ಬಳಿಹೋದಾಗ ಅವರು 'ಎ'ಯ ವಿರುದ್ಧವೇ ತಮ್ಮ ಅಭಿಪ್ರಾಯವನ್ನು ನೀಡುವುದಾದಲ್ಲಿ ವಿಷಯವು ಅಲ್ಲಿಗೇ ಮುಕ್ತಾಯವಾಗುತ್ತದೆ. ಇಂಥಾ: ಸಂಧರ್ಭಗಳಲ್ಲಿ 'ಎ'ಯು ಸಮಸ್ಯೆಯನ್ನು ಸಭೆಗೆ ಕೊಂಡೊಯ್ಯುವಂತಿಲ್ಲ . ಆತನು ಸ್ಪಷ್ಟವಾಗಿ ಸ್ವಂತ ಅಭಿಪ್ರಾಯವುಳ್ಳವನಾಗಿ ಸಂಗತಿಗಳನ್ನು ಮುಂದುವರಿಸುವ ಅಮಲುಳ್ಳವನಾಗಿರುತ್ತಾನೆ. ಕರ್ತನ ಸೂಚನೆಗಳು ಆತನಿಗೆ ಯಾವುದೇ ಮುಂದಣ ವಿನಾಯತಿಗಳನ್ನು ನೀಡುವುದಿಲ್ಲ (ಮತ್ತಾಯ ೧೮:೫ ನೋಡಿರಿ), ಆದರೆ ಆತನು ಇನ್ನೂ ಸಹಾ ತೃಪ್ತಿಗೊಳ್ಳದೇ ಹೋದಲ್ಲಿ, ಆತನು ದುರಾಗ್ರಹವಿಲ್ಲದ ಸಮರ್ಥರಾದ ಬೇರೆ ಎರಡು ಮೂರು ಸಹೋದರರನ್ನು (ಇ, ಎಫ್, ಜಿ) ಸಂಪರ್ಕಿಸಿ ಅವರುಗಳು ಪ್ರಕರಣವನ್ನು ಮತ್ತೊಮ್ಮೆ ಆಲಿಸಿ ತಮ್ಮ ಅಭಿಪ್ರಾಯವನ್ನು, ಬುದ್ದಿಮಾತುಗಳನ್ನು ನೀಡುವಂತೆ ಬಯಸಿದಲ್ಲಿ ಅದರಿಂದ ಯಾವುದೇ ಸಿದ್ಧಾಂತವನ್ನು ಮೀರಿದಂತಾಗುವುದೆಂದು ನಮಗೆ ತಿಳಿಯದು.

ಆದರೆ, 'ಎ'ಯು 'ಸಿ' ಮತ್ತು 'ಡಿ' ಯನ್ನು 'ಬಿ'ಯ ಬಳಿ ಕೊಂಡೊಯ್ದಲ್ಲಿ, ಅವರುಗಳೆಲ್ಲರೂ 'ಬಿ'ಯು ತಪ್ಪುಗಾರನೆಂಬ 'ಎ'ಯ ವಾದದ ಪಕ್ಷವಹಿಸಿ ಅದನ್ನು ಬಿಟ್ಟುಕೊಡಲು ಒಪ್ಪದೇ ಹೋದಲ್ಲಿ ಮತ್ತು 'ಬಿ'ಯು ಉಚಿತ ಸಮಯದ ನಂತರವೂ ತನ್ನ ತಪ್ಪನ್ನು ತಿದ್ದಿಕೊಳ್ಳಲು ನಿರ್ಲಕ್ಷಿಸಿದಲ್ಲಿ ಅಥವಾ ತಿರಸ್ಕರಿಸಿದಲ್ಲಿ , 'ಎ'ಯು 'ಸಿ' ಮತ್ತು 'ಡಿ'ಯರ ಸಂಯೋಗದೊಡನೆ ಸಭಾಕೂಟವನ್ನು ಕರೆಸುವ ಹಕ್ಕುಗಳಿಸುತ್ತಾನೆ. ಆ ಕೂಟಕ್ಕೆ 'ಎ' ಮತ್ತು 'ಬಿ' ಇಬ್ಬರೂ ಪ್ರತ್ಯೇಕವಾಗಿ ಇಡೀ ಸಂಗತಿಗಳನ್ನು ಪುನಃ ವಿವರಿಸಬೇಕಾಗುತ್ತದೆ. 'ಬಿ'ಯು ಇನ್ನೂ ಸಭೆಯ ಸಹವಾಸದಲ್ಲಿ ಇರುವುದಾದಲ್ಲಿ, 'ಬಿ'ಯು ಪ್ರಾಮಾಣಿಕನು ಎಂದು ಭಾವಿಸುವುದಾದಲ್ಲಿ ಆತನು ಅದರ ಸಮಾಲೋಚನೆಯನ್ನು ಮತ್ತು ಅಧಿಕಾರವನ್ನು ಮಾನ್ಯಮಾಡುತ್ತಾನೆ. ಸಭೆಯು ಪ್ರಕರಣವನ್ನು ಆಲಿಸುವಾಗ , ಸಭೆಯು ಕೇವಲ ನ್ಯಾಯಪ್ರತಿಪಾದಕ ರಿಂದಲೂ, ಪವಿತ್ರರಿಂದಲೂ ರಚಿತವಾದುದೆಂಬುದನ್ನು ಮತ್ತು ಸಭೆಯವರು ತಮ್ಮ ಶಿರಸ್ಸಾದ ಕರ್ತನ ಹೆಸರಲ್ಲಿ ನ್ಯಾಯತೀರಿಸಲು ಕುಳಿತಿದ್ದಾರೆಂಬುದನ್ನು ಮರೆಯಲಾಗದು. ಈ ಸಂಗತಿಯು ಸಭೆಯ ಪಕ್ಷಗಳ ನಡುವಿನ ಕಾದಾಟವಾಗಿರದೆ ಅದರ ಅನ್ಯೂನತೆಯ ಬಂಧವನ್ನು ಭದ್ರಪಡಿಸುವುದಾಗಿರಬೇಕು. 'ಎ' ಮತ್ತು 'ಬಿ'ಯು ಮತದಾನ ನೀಡಬಾರದು ಮತ್ತು ದೇವರ ತೀರ್ಪಲ್ಲದೆ ಬೇರೆ ಏನನ್ನಾದರೂ ಹೇಳಬಯಸುವವರೂ ತಮ್ಮ ಮತ ನೀಡಬಾರದು. ನಿರ್ಣಯವು ಒಮ್ಮತದ್ದಾಗಿರತಕ್ಕದ್ದು ಅಥವಾ ಕಾರ್ಯರೂಪದಲ್ಲಿಯಾದರೂ ಹಾಗಿರತಕ್ಕದ್ದು – ಮನೋಭಾವಗಳ ಅತಿರೇಖಗಳಿಗೆ ಸ್ವಲ್ಪಮಟ್ಟಿನ ಮಾರ್ಪಾಡುಗಳು ಬೇಕಾಗಬಹುದು. ನ್ಯಾಯವು ಸದಾ ಕರುಣೆಯಿಂದ ಹದಮಾಡಲ್ಪಟ್ಟದ್ದಾಗಿರಬೇಕು. – ***"ನಿಮ್ಮಲ್ಲಿ ಯಾರಾದರೂ ಯಾವುದೋ ಒಂದಿ ದೋಷದಲ್ಲಿ ಸಿಕ್ಕಿದರೆ ಅಂಥವನನ್ನು ಆತ್ಮನಿಂದ ನಡಿಸಿಕೊಳ್ಳುವ ನೀವು ಶಾಂತಭಾವದಿಂದ ತಿದ್ದಿ ಸರಿಮಾಡಿರಿ. ನೀನಾದರೋ ದುಷ್ಪ್ರೇರಣೆಗೆ ಒಳಗಾಗದಂತೆ ನಿನ್ನ ವಿಷಯದಲ್ಲಿ ಎಚ್ಚರಿಕೆಯಾಗಿರು"*** (ಗಲಾತ್ಯ ೬:೧)

ಸಬೆಯ ತೀರ್ಪು ಅಂತಿಮವಾದುದೆಂದು ಎಲ್ಲರೂ ಒಪ್ಪಿಕೊಳ್ಳಬೇಕು. ಅಂಥಾಃ ನೀತಿ ಸಂಬಂಧಿತ ವಿಚಾರಗಳಲ್ಲಿ (ಆತ್ಮಸಾಕ್ಷಿಯಿಂದಲ್ಲದೆ) ಯಾರಾದರೂ ಒಪ್ಪಿಕೊಳ್ಳಲು ಮತ್ತು ಅನುಸರಿಸಲು ತಿರಸ್ಕರಿಸಿದಲ್ಲಿ ಅಂಥವನು ಸಭೆಯನ್ನು ಪ್ರತಿಭಟಿಸುವುದನ್ನು ನಿಲ್ಲಿಸುವವವರೆಗೂ ಆತನನ್ನು ಅನ್ಯನಂತೆ ಇತರರಿಗೆ ಒಪ್ಪಿಸಲಾಗುವದು. ಪ್ರತಿಭಟನೆ ನಿಲ್ಲಿಸಿದಲ್ಲಿ

ನಿಜವಾಗಿ ಆತನನ್ನು ಕ್ಷಮಿಸಿ ಹಿಂದಿನಂತೆ ಆತನನ್ನು ಸಭೆಯ ಸಹವಾಸಕ್ಕೆ ಪುನಃ ಸೇರಿಸಿಕೊಳ್ಳಲಾಗುವುದು. ಇದರ ಉದ್ದೇಶ ಒಬ್ಬ ಸಹೋದರನನ್ನು ಸಂಪೂರ್ಣವಾಗಿ ಭಹಿಷ್ಕರಿಸುವುದಲ್ಲ, ಆತನ ತಪ್ಪು ಕ್ರಮಗಳ ಬಗ್ಗೆ ಆತನು ಅವನ್ನು ತಿದ್ದಿಕೊಳ್ಳಲಿ ಎಂಬ ಸದುದ್ದೇಶದಿಂದ ಆತನ ಬಗ್ಗೆ ಸ್ವಲ್ಪಮಟ್ಟಿನ ಅವಕೃಪೆ ತೋರುವುದು . ಇಂತವನನ್ನು ಅನ್ಯನಂತೆ ಕಾಣುವುದೆಂದರೆ ಆತನನ್ನು ಹೊರಹಾಕಿದ ಮೇಲೆಯೂ ನಿಂದಿಸಿ, ಅಗೌರವಿಸುವುದಲ್ಲ. ಕರ್ತನ ಜನರು ಯಾವುದೇ ಪರಿಸ್ಥಿತಿಯಲ್ಲೂ ನಿಂದನೆಗೊಳಗಾಗುವವರಲ್ಲ, ಚಾಡಿಕೋರರಲ್ಲ ; ಸರ್ವಸಾಮಾನ್ಯವಾದ ಆಜ್ಞಾಪನೆ ಏನೆಂದರೆ "ಯಾರ ಬಗ್ಗೆಯೂ ಕೆಟ್ಟದಾಗಿ ಮಾತನಾಡಬೇಡಿರಿ (ತೀತ ೩:೨ ನೋಡಿರಿ). ಈ ಮಾತು ಇದೆಲ್ಲವನ್ನೂ ನಿಷ್ಕೃಷ್ಟವಾಗಿ ಆವರಿಸುತ್ತದೆ. ನಾವು ಅನ್ಯರಬಗ್ಗೆ, ಪಾಪಿಗಳ ಬಗ್ಗೆ ಕೆಟ್ಟದಾಗಿ ಮಾತನಾಡಲೂ ಬಾರದು ಮತ್ತು ಅವರನ್ನು ಕೀಳಾಗಿ ಕಾಣಲೂ ಬಾರದು ಮತ್ತು ಅವರೊಡನೆ ವ್ಯವಹರಿಸಲು ತಿರಸ್ಕರಿಸಲೂ ಬಾರದು. ಆದರೆ ಅವರೊಡನೆ ವಿಶೇಷವಾದ ಸಾಂಗತ್ಯವನ್ನು ಮತ್ತು ನೂತನ ಸೃಷ್ಟಿಯ ಸಹೋದರರುಗಳಿಗೆ, ಪವಿತ್ರಾತ್ಮನನ್ನು ಹೊಂದಿದವರಿಗೆ ಮತ್ತು ಪ್ರೀತಿ, ಸಂತೋಷ ಮತ್ತು ಶಾಂತಿಯಲ್ಲಿ ನೆಲೆಯಾಗಿರುವವರಿಗೆ ತೋರುವ ಸೌಜನ್ಯವನ್ನು ತಡೆಹಿಡಿಯಬೇಕು.

'ಬಿ'ಯು ಸಭೆಯ ಮಾತನ್ನು ಕೇಳಲು ನಿರಾಕರಿಸಿ, 'ಎ'ಗೆ ತೊಂದರೆಕೊಡುವುದನ್ನು ನಿಲ್ಲಿಸದೇ ಇದ್ದು ನಂತರದಲ್ಲಿ ಪಶ್ಚಾತ್ತಾಪಟ್ಟಲ್ಲಿ ಆತನನ್ನು ಪೂರ್ಣ ಸಾಂಗತ್ಯಕ್ಕೆ ಪುನಃ ಸೇರಿಸಿಕೊಳ್ಳಲಾದರೂ ಆತನ ಅವಿಧೇಯತೆಯನ್ನು ಆತನು ಮುಂದೆ ಎಂದಾದರೂ ಸಭಾಹಿರಿಯ ಸ್ಥಾನಕ್ಕೆ ನಾಮಕರಣಗೊಂಡಾಗ ನೆನಪಿಸಲಾಗುವುದು ಆತನು ಆ ಸೇವೆಗೆ ಅರ್ಹನಾಗುವಂತೆ ಒಂದು ನಿರ್ಧಾರಿತ ಬದಲಾವಣೆಯನ್ನು ಪ್ರಕಟಿಸಬೇಕಾಗುತ್ತದೆ. ಆತನು ಸಂಪೂರ್ಣನಾಗಿ ಪ್ರಾಮಾಣಿಕನಾದರೂ ಆತನ ನಡವಳಿಕೆಗಳು ಸ್ವಹಿತವಿರುವಲ್ಲಿ ಸ್ಥೂಲವಾಗಿಲ್ಲವೆಂದು ರುಜುವಾತು ಆಗಬೇಕಾಗುತ್ತದೆ. ಮೂವರು ಸಹೋದರರ ಸಮಾಲೋಚನೆಗೆ ಅಲಕ್ಷತೋರುವುದು ಮತ್ತು ಸಭೆಗೆ ಆ ತಪ್ಪನ್ನು ನಿರ್ಣಯಕ್ಕೆ ತರುವ ಅಗತ್ಯತೆ ಇವುಗಳು ಆತನು ನಂತರದಲ್ಲಿ ವಿಧೇಯನಾಗಿ 'ಎ'ಯೊಂದಿಗೆ ಸಮಾಧಾನ ಮಾಡಿಕೊಂಡರೂ ನಿಜವಾಗಿಯೂ ಒಂದುರೀತಿಯ ಅಹಿತಕರ ಸೂಚನೆಯಾಗಿದೆ.

## *"ಏಳೆಪ್ಪತ್ತು ಸಾರಿ ಕ್ಷಮಿಸು"*

'ಎ'ಯು 'ಬಿ'ಯ ಬಳಿಗೆ ತನಾಗದ ಅನ್ಯಾಯದ ಬಗ್ಗೆ ಚರ್ಚಿಸಲು ಹೋದನೆಂದು ಊಹಿಸೋಣ. ಈ ಸಮಾಲೋಚನೆಯಲ್ಲಿ 'ಬಿ'ಯು ತನ್ನ ತಪ್ಪನ್ನು ಒಪ್ಪಿಕೊಂಡು ತನ್ನಿಂದಾದ ಮಟ್ಟಿಗೆ ಅದನ್ನು ತಿದ್ದಿಕೊಳ್ಳುತ್ತೇನೆಂದು ಹೇಳಿದರೆ ಅಥವಾ 'ಸಿ' ಮತ್ತು'ಡಿ'ಯೊಂದಿಗೆ 'ಎ' ಎರಡನೆಯ ಬಾರಿಗೆ ತನ್ನನ್ನು ಬೆಟ್ಟಿಯಾಗಲು ಬಂದಾಗ ಆತನು ಪಶ್ಚಾತ್ತಪಪಟ್ಟು ಅದನ್ನು ಹೇಳುವುದಾದಲ್ಲಿ 'ಬಿ'ಯ ಬಗ್ಗೆ 'ಎ'ಯ ಮನೋವೃತ್ತಿ ಎಂತಿರಬೇಕು? ಆತನು ಅವನನ್ನು ಹೃದಯಪೂರ್ವಕವಾಗಿ ಕ್ಷಮಿಸತಕ್ಕದ್ದು. ಆತನು ಅವನಿಗೆ ಯಾವ ದಂಡವನ್ನೂ ವಿಧಿಸಬಾರದು ಮತ್ತು ***" ಪ್ರತೀಕಾರ ಮಾಡಿ ಮುಯ್ಯಿಗೆ ಮುಯ್ಯಿ ತೀರಿಸುವುದು ನನ್ನ ಕೆಲಸ"*** (ಧರ್ಮೋ ೩೨:೩೫) ಎಂದು ಕರ್ತನು ಹೇಳಿದ್ದಾನೆ ಎಂಬುದನ್ನು ಆತನು ನೆನಪಿನಲ್ಲಿಟ್ಟುಕೊಳ್ಳಬೇಕು. ಆದರೆ ಈ ರೀತಿಯಾಗಿ ಏಷ್ಟು ಸಾರಿ ಮಾಡಬೇಕಾಗುತ್ತದೆ? ಆತನು ಪಶ್ಚಾತ್ತಾಪಪಟ್ಟಲ್ಲಿ ಆತನನ್ನು ನಾವು ಎಷ್ಟು ಸಾರಿ ಕ್ಷಮಿಸಬಹುದು? ಆತನ ಬಲಹೀನತೆಯನ್ನು ನಾವು ಎಷ್ಟು ಸಮಯದವರೆಗೆ ತಾಳಿಕೊಳ್ಳಬಹುದು? ಏಳು ಸಾರಿಯೋ? ಎಂದು ಪೇತ್ರನು ಕೇಳುತ್ತಾನೆ. ಕರ್ತನ ಉತ್ತರವು ಅದೇ ದಾಟಿಯಲ್ಲಿ ನಮಗೆ ಹೀಗೆ ದೊರೆಯುತ್ತದೆ – ***"ಏಳು ಸಾರಿ ಎಂದಲ್ಲ, ಏಳೆಪ್ಪತ್ತು ಸಾರಿ ಎಂದು ನಾನು ನಿಮಗೆ ಹೇಳುತ್ತೇನೆ"*** ಮತ್ತಾಯ ೧೮:೨೧,೨೨ ನೋಡಿರಿ). ಪರಲೋಕದಲ್ಲಿರುವ ನಮ್ಮ ತಂದೆಯು ಆತನ ದೈವನಿಯಮಗಳನ್ನು ಮೀರಿದ ನಮ್ಮನ್ನು ಕ್ಷಮಿಸಬೇಕಾದಲ್ಲಿ ನಾವು ಸಹಾ ಇತರರು ನಮಗೆ ಮಾಡಿದ ತಪ್ಪುಗಳನ್ನು ಕ್ಷಮಿಸಲೇ ಬೇಕು. ನಾವು ನಮ್ಮ ಸಹೋದರನನ್ನು ಆತನ ಬಲಹೀನತೆಗಳ ನಿಮಿತ್ತ ಹೀನೈಸುವ ಪ್ರಲೋಭನೆ ಉಂಟಾದರೆ ***"ಕರುಣೆ ತೋರಿಸದೆ ಇರುವವನಿಗೆ ನ್ಯಾಯ ತೀರ್ಮಾನದಲ್ಲಿ ಕರುಣೆಯು ತೋರಿಸಲ್ಪಡುವುದಿಲ್ಲ"*** (ಯಾಕೋ ೨:೧೩) ಎಂಬ ಮಾತುಗಳನ್ನು ನೆನಪಿಗೆ ತಂದುಕೊಳ್ಳಬೇಕಾಗುತ್ತದೆ.

## ಸಭೆಯ ವಿರುದ್ಧವಾಗಿ ಮಾಡಿದ ಅಪರಾಧಗಳು

ವ್ಯಕ್ತಿಗಳು ಮಾಡಿದ ಅಪರಾಧಗಳ ನಿರ್ಣಯದ ಬಗ್ಗೆ ಸರಿಯಾದ ರೀತಿಯಲ್ಲಿ ಕೈಕೊಳ್ಳಬಹುದಾದ ಸಂಗತಿಗಳ ಬಗ್ಗೆ ನಾವು ಪರಿಗಣಿಸಿದ್ದೇವೆ. ಆದರೆ ಅಪೋಸ್ತಲನು ಹೇಳಿದ ವ್ಯಭಿಚಾರ ಅಥವಾ ಇತರ ಪ್ರಕರಣಗಳಲ್ಲಿ ಅಪರಾಧವು ಸಭೆಯ ಯಾವುದೇ ನಿರ್ಧಿಷ್ಟ ವ್ಯಕ್ತಿಯ ವಿರೋಧವಾಗಿ ಇಲ್ಲದೇ ನಾವು ಪ್ರತಿನಿಧಿಸುವ ಕಾರಣಕ್ಕೆ ಸಂಪೂರ್ಣ ವಿರೋಧವಾಗಿದ್ದಿರಬಹುದು. ಇಂಥಾಃ ಸಂಧರ್ಭಗಳಲ್ಲಿ ಯಾವ ರೀತಿಯ ಕ್ರಮ ಕೈಕೊಳ್ಳಬಹುದು?

ಪಾಪವು ಸಾರ್ವಜನಿಕ ಆಸ್ಥಿಯಾಗದೇ ಹೋದಲ್ಲಿ ಇದು ವ್ಯಕ್ತಿಗತ ಅಪರಾದಕ್ಕೆ ಸಮವಾಗಿದೆ. ಆದರೆ ಸಂಗತಿಗಳು ಸಾರ್ವಜನಿಕವಾಗಿ ತಿಳಿದುಬಂದಲ್ಲಿ ತಪ್ಪಿತಸ್ಥನನ್ನು ಯಾವುದೇ ಪೂರ್ವಭಾವಿ ಖಾಸಗಿ ಬೇಟಿಗಳಿಲ್ಲದೆ ಸಭೆಯ ಮುಂದೆ ವಿಚಾರಣೆಗಾಗಿ ಹಾಜರಾಗುವಂತೆ ಅಧಿಕಾರಯುತ ಕರೆಕೊಡುವುದು ಸಭಾಹಿರಿಯರ ಕರ್ತವ್ಯ ವಾಗುತ್ತದೆ. ಯಾಕೆಂದರೆ ಯಾವುದೇ ಖಾಸಗಿ ತೀರ್ವಿಕೆಗಳಿಗೆ ಮೀರಿದ ರೀತಿಯಲ್ಲಿ ಇದು ಪ್ರಚಾರಗೊಂಡಿದೆ. ಅದರಂತೆ, ಹಿರಿಯರ ಅಥವಾ ಅವರಲ್ಲಿ ಯಾರೊಬ್ಬರ ವಿರುದ್ಧವಾದ ಸುಳ್ಳು ನಿಂದನೆಯಾಗಿದ್ದಲ್ಲಿ ವಿಚಾರಣೆಯು ಖಾಸಗಿಯಾಗಿ ನಡೆಯದೆ ಸಭೆಯ ಮುಖಾಂತರವೇ ನಡೆಯತಕ್ಕದ್ದು ; ಯಾಕೆಂದರೆ, ನಿಂದನೆಮಾಡುವವರು ತಮಗೆ ಒಂದು ಒಳ್ಳೆಯ ಕಾರಣವಿದೆ ಎಂದು ಪ್ರಾಮಾಣಿಕವಾಗಿ ಆಲೋಚಿಸಿದ್ದಿರಬಹುದಾದರೂ, "ಆತನ ಬಳಿ ಒಬ್ಬನೇ ಹೋಗು, ನಂತರ ಒಂದಿಬ್ಬರನ್ನು ನಿನ್ನೊಡನೆ ಕರಕೊಂಡು ಹೋಗು" ಎಂಬ ದೇವರ ಆಜ್ಞೆಯನ್ನು ನಿರ್ಲಕ್ಷಿಸಿದ್ದಾರೆ ಮತ್ತು ನಿಂದನೆಗಳನ್ನೂ ವದಂತಿಗಳನ್ನು ಹರಡಿಬಿಟ್ಟಿದ್ದಾರೆ. ಈ ರೀತಿಯಲ್ಲಿ ಅವರು ಪ್ರಕರಣವನ್ನು ವ್ಯಕ್ತಿಗತ ಸರಿಪಡಿಸುವಿಕೆಯ ಅಧಿಕಾರವನ್ನು ಮೀರಿ ಇದೀಗ ಅದು ಸಭೆಯ ವಿಚಾರವನ್ನಾಗಿ ಮಾಡಿಬಿಟ್ಟಿದ್ದಾರೆ.

ಇಂಥಾಃ ಪ್ರಕರಣಗಳಲ್ಲಿ ನಿಂದನೆಗೊಳಗಾದ ಹಿರಿಯನು ಸಭೆಯ ಪ್ರತಿನಿಧಿಗಳಾದ ಸಭಾಕೂಟದ ಹಿರಿಯರನ್ನು ಒಂದುಗೂಡಿಸಿ ತನ್ನ ವಿರೋಧವಾಗಿ ಮಾಡಲ್ಪಟ್ಟಿರುವ ಆಪಾದನೆಗಳೆಲ್ಲವನ್ನು ನಿರಾಕರಿಸಿ ನಿಂದನೆಮಾಡಿದವರನ್ನು ತಮ್ಮ ಅಪಾಧನೆಗಳು ಮತ್ತು ಸುಳ್ಳುಸಾಕ್ಷಿಗಳ ಬಗ್ಗೆ ಸಭೆಗೆ ಉತ್ತರಿಸುವಂತೆ ಸೂಚಿಸತಕ್ಕದ್ದು. ಯಾಕೆಂದರೆ, ಅವರ ಅಪರಾಧವು ಸಭೆಗೆ ವಿರುದ್ಧವಾಗಿದೆ (೧) ಸಭಾ ಮುಖ್ಯಸ್ತನು ವಿಧಿಸಿರುವ ನಿಯಮಗಳಿಗೆ ವಿರುದ್ಧವಾಗಿದೆ ಮತ್ತು ಸಭ್ಯತೆ ಮತ್ತು ಉತ್ತಮ ನೀತಿಯ ವಿರುದ್ಧವಾಗಿದೆ. (೨) ಆಪಾಧನೆಯು ಸಭೆಯು ಆಯ್ಕೆಮಾಡಿರುವ ಹಿರಿಯನ ಮೇಲೆ ಆಗಿರುವುದರಿಂದ ಇದು ಸಭೆಯ ಮೇಲೆ ಮಾಡಿದ ಆಪಾದನೆಯೇ ಆಗುತ್ತದೆ. ಈ ರೀತಿಯ ಸುಳ್ಳು ಆಪಾದನೆ ಮಾಡಿದವರನ್ನು ಖಂಡಿಸಬೇಕು, ಗದರಿಸಬೇಕು ಮತ್ತು ತಮ್ಮ ತಪ್ಪುಗಳನ್ನು ಒಪ್ಪಿಕೊಳ್ಳುವಂತೆ ಮಾಡಬೇಕು. ಆದರೆ, ನಂತರದಲ್ಲಿ ಅವರು ತಪ್ಪು ಮಾಡಿರಬಹುದಾದ ಹಿರಿಯನ ವಿರುದ್ಧವಾಗಿ ಈ ಮೊದಲು ಮಾಡಿದಂತೆ ಮುಂದುವರೆಯುವ ಅಧಿಕಾರವನ್ನು ಹೊಂದಿರುತ್ತಾರೆ.

## "ನಾವೆಲ್ಲರೂ ಕ್ರಿಸ್ತನ ನ್ಯಾಯಾಸನದ ಮುಂದೆ ಯಥಾಸ್ಥಿತಿಯಲ್ಲಿ ಕಾಣಿಸಿಕೊಳ್ಳಬೇಕು"

**– ೨ ಕೊರಿ ೦೫:೧೦ –**

ಈ ವಚನದಲ್ಲಿರುವ 'ನಾವು' ಎಂಬುವ ಪದ ನಿಸ್ಸಂಶಯವಾಗಿ ಸಭೆಗೆ ಅಂದರೆ ನೂತನ ಸೃಷ್ಟಿಗೆ ಅನ್ವಯ ವಾಗುತ್ತದೆ. ಇದನ್ನು ಹೇಗಾದರೂ ಮತ್ತಾಯ ೨೫:೩೧–೪೬ ರಲ್ಲಿ ವಿವರಿಸಿರುವಂತೆ ದೇವಕುಮಾರನು ತನ್ನ ಸಕಲ ವೈಭವದೊಡನೆ ಮತ್ತು ಪವಿತ್ರ ದೂತಗಣಗಳೊಡನೆ ಬರುವಾಗ ಆತನ ಮುಂದೆ ಎಲ್ಲಾ ಜನಾಂಗದವರ ಸಾಮಾನ್ಯ ಒಟ್ಟುಗೂಡುವಿಕೆ ಎಂಬಂತೆ ಕಲಸು ಮೇಲೋಗರ ಮಾಡಬಾರದು. 'ದೇವಕುಮಾರನು ತನ್ನ ವೈಭವದೊಡನೆ ಸಿಂಹಾಸನದಲ್ಲಿ ಕುಳಿತುಕೊಳ್ಳುವಾಗ' ತನ್ನ ನಿಷ್ಟಾವಂತ ಮದಲಗಿತ್ತಿಯಂತಿರುವ ಸಭೆಯು ಆ ಸಿಂಹಾಸನದಲ್ಲಿ ಮತ್ತು

ತನ್ನ ಮಹಿಮೆಯಲ್ಲಿ ಪಾಲುದಾರರರಾಗುತ್ತಾರೆಂದು ಕರ್ತನು ತಾನೇ ವಾಗ್ದಾನಮಾಡಿರುತ್ತಾನೆ. ಇದು ಧರ್ಮಯುಗದಲ್ಲಿ ಸಮಾಧಿಗೆ ಸೇರಿದವರೂ ಒಳಗೊಂಡು ಎಲ್ಲಾ ಜನಾಂಗಗಳಿಗೆ ನಡೆಯಲಿರುವ ಮಹಾ ತೀರ್ಪಿನ ಕಾಲದಲ್ಲಿ.

ಸಭೆಯ ನ್ಯಾಯತೀರ್ಪಿನ ಬಗ್ಗೆ ಮತ್ತಾಯ ೨೫:೧೪-೩೦ ಮತ್ತು ಲೂಕ ೧೯:೧೨-೨೬ರಲ್ಲಿ ಸ್ಪಷ್ಟವಾಗಿ ಚಿತ್ರಿಸಲಾಗಿದೆ. ಇದು ಯುಗಾಂತ್ಯದಲ್ಲಿ ನಡೆಯಲಿದ್ದು ಅರಸನ ಎರಡನೇ ಬರೋಣದಲ್ಲಿ ಆತನು ಲೋಕದವರೊಂದಿಗೆ ವ್ಯವಹರಿಸಲು ಪ್ರಾರಂಭಿಸುವ ಮೊದಲು ನೆರವೇರಿಸಲಿರುವ ಮೊಟ್ಟಮೊದಲ ಕಾರ್ಯವಾಗಿದೆ. ಆತನು ಮೊದಲಿಗೆ ವಿವಿಧ ಮನೆವಾರ್ತಾ ಜವಾಬ್ಧಾರಿಗಳನ್ನು ವಹಿಸಿ ಕೊಟ್ಟಿರುವ ತನ್ನ ಸ್ವಂತ ಸೇವಕರಿಂದಲೇ ಲೆಕ್ಕಾಚಾರ ಆರಂಭಿಸುತ್ತಾನೆ. ಆತನು ಅವರಿಗೆ ಸಂಪತ್ತು, ಪ್ರಭಾವ, ಮೇಧಾಶಕ್ತಿಗಳನ್ನು ದಯಪಾಲಿಸಿದ್ದು ಅದಕ್ಕೆ ಅವರು ಹೆಚ್ಚುಕಡಿಮೆ ನಿಷ್ಟರಾಗಿದ್ದು ಅವುಗಳನ್ನು ಕಾಪಾಡಲು ಸ್ವಯಂತ್ಯಾಗವನ್ನೂ ಮಾಡಿದ್ದಿರಬಹುದು. ಇದೆಲ್ಲವನ್ನೂ ಗಣನೆಗೆ ತೆಗೆದುಕೊಂಡು ನಿಷ್ಟಾವಂತರಿಗೆ ಎರಡು, ಐದು ಅಥವಾ ಹತ್ತು ನಗರಗಳನ್ನು ಆಳವಂತೆ ಪುರಸ್ಕರಿಸಲಾಗುವುದು. ಇಲ್ಲವಾದರೆ ಬೇರೆರೀತಿಯಲ್ಲಿ ಕರ್ತನ ಸಂತೋಷವನ್ನು ಅನುಭವಿಸುವಂತೆ ನಿಶ್ಚಯಿಸಲಾಗುವುದು. ಮಹಿಮೆ ಮತ್ತು ಗೌರವದ ಬಗ್ಗೆ ಇರುವ ಬಹುಮಾನಗಳು ಮಹಿಮೆಯುಳ್ಳದ್ದು, ಗೌರವವುಳ್ಳದ್ದು ಆಗಿದ್ದರೂ ಎಲ್ಲವೂ ಒಂದೇ ತೆರನಾಗಿರುವುದಿಲ್ಲ – ಒಚಿದು ನಕ್ಷತ್ರವು ಮತ್ತೊಂದಕ್ಕೆ ವತ್ಯಾಸವಿರುವಂತೆ (೧ ಕೊರಿ ೧೫:೪೧ ನೋಡಿರಿ)

ಪ್ರಾಮಾಣಿಕತೆ, ಪ್ರೀತಿ ಮತ್ತು ಉತ್ಸಾಹ ಇವುಗಳು ಪರೀಕ್ಷೆಗಳು. ತಲಾಂತುಗಳನ್ನು ಹೊಂದಿದವರು ಅದನ್ನು ಭೂಮಿಯಲ್ಲಿ ಹೂತುಹಾಕಿಯೋ, ಅಥವಾ ವ್ಯಾಪರದಲ್ಲಿ ತೊಡಗಿಸಿಯೋ ಅಥವಾ ತಮ್ಮ ಸ್ವಂತ ಸಂತೋಷಕ್ಕಾಗಿ ಉಪಯೋಗಿಸಿಯೋ ಅಥವಾ ಅವುಗಳ ಬಗ್ಗೆ ಆಲಸ್ಯ ತೋರಿಸುವವರಾಗಿ ಅದರ ಮೇಲಿನ ಪ್ರೀತಿಯಲ್ಲಿ, ಮೆಚ್ಚುಗೆಯಲ್ಲಿ ಕೊರತೆ ತೋರಿಸುವವರಾಗಿರುತ್ತಾರೆ. ಇದರ ಪರಿಣಾಮವಾಗಿ ಅವರು ದೇವರ ರಾಜ್ಯಕ್ಕೆ ಅನರ್ಹರಾಗಿ ಕರ್ತನ ಸಂತೋಷವನ್ನು ಪ್ರವೇಶಿಸುವುದಿಲ್ಲ ಮತ್ತು ಆತನೊಂದಿಗೆ ಈ ಲೋಕವನ್ನು ಆಳುವ ಆಶೀರ್ವಾದವನ್ನು ಹೊಂದಿಕೊಳ್ಳುವುದಿಲ್ಲ.

==================